ಕೊರವಂಜಿ



ಜನವರಿ

೧೯೬೫

KORAVANJI

Kannada Monthly

ಸಂಪಾದಕರು :

ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ಅ. ರಾ. ಸೇ.

ಶ್ರೀ|| ರಾಮಿ

ಶ್ರೀಮತಿ ಟಿ. ಸುನಂದಮ್ಮ

ಶ್ರೀ|| ಕೇಫ

ಶ್ರೀ|| ದಾಶರಥಿ ದೀಕ್ಷಿತ್

ಶ್ರೀಮತಿ ಮಂದಾಕಿನಿ

ಇತ್ಯಾದಿ ಇತ್ಯಾದಿ

೨೫ ಪೈ.

ತಿಳಿನಗೆಯ ಮಾಸಪತ್ರಿಕೆ


For 3 way Beauty Treatment....
RAJA SNOW
RAJA
SNOW
AMLA HAIR OIL , KASTURI SOAP
MANYAM & CO. BANGALORE MADRAS MADURAI BOMBAY

ಕೊರವಂಜಿ

ಸಂಪುಟ ೨೩] ಜನವರಿ ೧೯೬೫ [ಸಂಚಿಕೆ ೧೦

ಶುಭಾಶಯಗಳು

ಮೂವತ್ತರ ಪ್ರಾಯದಲ್ಲಿ ಸಂತ ಜ್ಞಾನ್ ಅವರಿಂದ ದೀಕ್ಷೆ ಪಡೆದ ಆತ. ಮೂವತ್ತಮೂರರ ಪ್ರಾಯದಲ್ಲಿ ಸೋದರರಿಂದಲೇ ಶಿಲುಬೆಗೆ ಏರಿಸಲ್ಪಟ್ಟ.

ಆದರೆ ಆತ ಹಚ್ಚಿಟ್ಟ ಒಲುಮೆಯ ಹಣತೆಯು ನಂದಾದೀಪವಾಗಿ ೧೯೬೪ ವರ್ಷಗಳಿಂದಲೂ ಬೆಳಗುತ್ತಿದೆ. ಪ್ರಾಜ್ವಲ್ಯಮಾನವಾಗುತ್ತಿದೆ. ಪ್ರೇಮದೂತನ ಸಂದೇಶದಿಂದಾಗಿ, ಒಲವಿನಿಂದಾಗಿ, ನಮ್ಮ ಓದುಗಳೆಲ್ಲರೂ, ಮಿಕ್ಕೆಲ್ಲ ಮಾನವರೊಡನೆ ಮುಂದಿನ ವರ್ಷ, ಶಾಂತಿ, ಸುಖ. ಹಿತ ಜೀವನವನ್ನು ನಡೆಸುವಂತಾಗಲಿ ಎಂದು ದೇವನಡಿ ಮಂಡಿಯೂರಿ ಕೊರವಂಜಿಯು ಪ್ರಾರ್ಥಿಸುತ್ತಾಳೆ.

* * * *

ನಾಲ್ವತ್ತು ವರ್ಷಗಳಿಂದ ಶಾರದೆಯ ಗುಡಿಯಲ್ಲಿ ಉಗ್ರ ಸಾರಸ್ವತ ತಪಸ್ಸು ಮಾಡಿ ತಮ್ಮ ಆತ್ಮ ಸಿದ್ಧಿಯನ್ನು ಮಾಡಿಕೊಂಡಿರುವ, ದೈವದತ್ತ ಸ್ಫೂರ್ತಿಯನ್ನು ಕಟು ತಪಸ್ಸಿನಿಂದ ಹದನುಗೊಳಿಸಿ ಆತ್ಮಜ್ಞಾನವನ್ನು ಹೊಂದಿರುವ "ಕುವೆಂಪು" ಅವರು ರಾಷ್ಟ್ರ ಕವಿಗಳಾದುದನ್ನು ಕೇಳಿ ಕೊರವಂಜಿಯು ಹಿಗ್ಗಿ, ರಾಷ್ಟ್ರಕ್ಕೆ ಈ ಒಳ್ಳೇ ಬುದ್ಧಿ ಬಂದಿತಲ್ಲಾ ಎಂದು ಸಂತೋಷ ಪಡುತ್ತಾಳೆ.

ಕು ಹ ಕ ಡಿ ಗ ಳು

ಕೇರಳದಲ್ಲಿ ನಾಗರಹಾವು ಒಂದು ತನ್ನ ಬಾಲವನ್ನೇ ನುಂಗಲು ಪ್ರಯತ್ನಿಸಿ ನಿಧನ ಹೊಂದಿತಂತೆ.

—ಕೇರಳದ ರಾಜಕೀಯ ಪಕ್ಷಗಳಿಗೆ ಎಂತಹ ನೀತಿ ಪಾಠ !!

* * * *

ಬಹುಪತೀತ್ವದ ಸೊಬಗನ್ನು ಸಿಕ್ಕಿಂನ ರಾಜಕುಮಾರಿಯು ಅಖಿಲ ಮಹಿಳಾ ಸಮ್ಮೇಳನದಲ್ಲಿ ಬಣ್ಣಿಸಿದಾಗ:—

—ಹಲವಾರು ಸದಸ್ಯಣಿಯರು ಸಿಕ್ಕಿಂನಲ್ಲಿ ನಾವೂ ಹುಟ್ಟಬಾರದಾಗಿತ್ತೆ ಎಂದು ಉದ್ಗಾರವನ್ನು ತೆಗೆಯಲಿಲ್ಲವಂತೆ.

* * * *

ಮಾಜಿ ಮಂತ್ರಿಗಳು ಭಾರಿ ಸಭೆಯೊಂದು ಸೇರಿ "ಆಹಾರ ಅಭಾವ"ದ ವಿಷಯ ಚರ್ಚೆ ನಡೆಸುತ್ತದಂತೆ (ಪತ್ರಿಕೆ)

—ಅವರುಗಳಿಗೆ ಆಹಾರದ ಅಭಾವ ಅನ್ನುವ ವಿಷಯವೇ ?

* * * *

ಹೆಂಡತಿಯ ಗಮನವನ್ನು ಸೆಳೆಯಲು ಗಂಡ ನವಿಲು ಕಾಲನ್ನು ಧಪಧಪ ಕುಟ್ಟುತ್ತದಂತೆ. ತತ್‌ಕ್ಷಣ ಗರಿಗಳ ಮರೆಯಲ್ಲಿ ತಲೆಯನ್ನು ಹುದುಗಿಸಿಕೊಳ್ಳುತ್ತದಂತೆ.

—ಇಷ್ಟು ಜಾಣತನದಿಂದ ಮುಂಜಾಗ್ರತಾ ಕ್ರಮ ನಡೆಸುವುದರಿಂದಲೇ ಅದನ್ನು ರಾಷ್ಟ್ರಪಕ್ಷಿಯನ್ನಾಗಿ ನಾವು ಆರಿಸಿಕೊಂಡಿರಬಹುದು.

* * * *

ಬೆಂಗಳೂರಿನ ಕಾರ್ಪೊರೇಷನ್ ಚುನಾವಣೆಗಳಲ್ಲಿ ಜೋಡೆತ್ತುಗಳಿಗೆ ಲಾಳ ಸರಿಯಾಗಿ ಹೊಡೆಸಿತ್ತಿಲ್ಲ ಆದುದರಿಂದ ಕುಂಟಿದ ಆ ಚಿಹ್ನೆಗೆ ಸೋಲಾಯಿತು ಎಂದೊಬ್ಬರ ಅಂಬೋಣ.

* * * *

ಈ ಬಾರಿ ಕಾರ್ಪೊರೇಷನ್ ಚುನಾವಣೆಯಲ್ಲಿ ಒಬ್ಬಳೇ ಮಹಿಳೇ ಆಯ್ಕೆಯಾಗಿದ್ದಾಳಂತೆ.

ಆಕೆಯನ್ನೇ "ಮೇಯರ್ ಆಗಿ ಈಗ ಆರಿಸಬಹುದಲ್ಲ! ಆಗ ಮುಂದಿನ ಗೊಂದಲ ತಪ್ಪುತ್ತೆ.

ಬಹಿರಂಗ ಪತ್ರ

ಮಾನ್ಯ ನೈಪಾಲ್ ಅವರಿಗೆ ವಂದನೆಗಳು,
ಸನ್ಮಾನ್ಯ ಅಪರಿಚಿತ ಮಿತ್ರರೇ,

ನಿಮ್ಮ ನಿವಾಸದ ವಿಳಾಸ ತಿಳಿಯದುದರಿಂದ ಬಹಿರಂಗ ಪತ್ರ ಬರೆಯಬೇಕಾಯಿತು ಅಂತರಂಗದ ವಿಚಾರಗಳನ್ನು ಹೀಗೆ ಹೊರಪಡಿಸಿದುದಕ್ಕಾಗಿ ಕ್ಷಮಿಸಿ.

ಈಗಲೀಗ ನೀವು ಇಂಗ್ಲಂಡಿನಲ್ಲಿರುವಿರಾದುದರಿಂದ ನೀವು T S ಎಲಿಯಟ್ ಎಂಬ ಹೆಸರನ್ನು ಕೇಳಿರಬಹುದು. ಆತನು ಅನೇಕ ದೇಶಗಳಲ್ಲಿ ತಿರುಗಾಡಿ ಏನೆಲ್ಲವನ್ನೂ ನೋಡಿದ್ದರೂ, ಆತನಿಗೆ ಆಗಾಗ ಕೆಲವು ಪ್ರತಿಮೆಗಳು (ನೆನಪುಗಳು ಅಥವಾ ಕಂಡಿದ್ದ ದೃಶ್ಯಗಳು) ಮನಸ್ಸಿನಲ್ಲಿ ಮೂಡುತ್ತವಂತೆ ಯಾವುದೋ ರೈಲ್ವೆ ಸ್ಟೇಷನ್ನಿನಲ್ಲೋ (ಅಥವಾ ಚರ್ಚಿನ ಬಳಿಯಲ್ಲಿಯೋ) ಅಥವಾ ಇನ್ನೆಲ್ಲೋ ಇಸ್ಪೀಟಾಡುವ ಆರು ಜನರ ಚಿತ್ರ ಆತನ ಕಣ್ಣಿಗೆ ಮತ್ತೆ ಮತ್ತೆ ಕಟ್ಟಿದಂತೆ ಆಗುತ್ತಿದ್ದಯಂತೆ.

ನನಗೂ ಹಾಗೆಯೇ ; ಪತ್ರಿಕೆಗಳಲ್ಲಿ ದಿಕ್ಕಾಬಟ್ಟೆ ದೊಂಬಿಗಳ ಸುದ್ದಿ ಬರುತ್ತಿದ್ದರೂ ಆಗಾಗ ಭಗ್ನಮನರಾದ ಆಶಾನಿಶ್ಶೇಷರಾದ ಸಾಹಿತ್ಯಕಾರರ ಸುದ್ದಿಗಳು ಮತ್ತೆ ಮತ್ತೆ ಅಸ್ಪಷ್ಟವಾಗಿ ನೆನಪಿಗೆ ಬರುತ್ತವೆ. ಹೊವಾರ್ಡ್‌ಫಾಸ್ಟ್, ಪ್ಯಾಸ್ಟರ್‌ನ್ಯಾಕ್ ಇತ್ಯಾದಿ. ಇವರ ಸಾಲಿನಲ್ಲಿ ನೀವೂ ನುಸುಳಿಕೊಳ್ಳಲು ಯತ್ನಿಸಿದ ಸುದ್ದಿಯನ್ನೂ ಇತ್ತೀಚೆಗೆ ಎಲ್ಲೋ ಓದಿದೆ.

ಎಲ್ಲಿ ? ನೆನಪಿಲ್ಲ !

ಆ ಸುದ್ದಿ ಅಥವಾ ಟಿ ಕೆಯ ಸಾರಾಂಶ (ನನಗೆ ನೆನಪಿರುವಂತೆ) ಇದು :

ತಾವು ಭಾರತಕ್ಕೆ ಬಿಜಯಂಗೈದು, ಇಲ್ಲಿ ವಾಸ್ತವ್ಯ ನಡಸಿದಿರಂತೆ. ನಿಮ್ಮ ನೆಚ್ಚಿನ ನೆಲವಿ ಡಿನಲ್ಲಿ ನಿಮ್ಮ ಅಂತರಂಗದ ಮೌಲ್ಯಗಳ ಅನ್ವೇಷಣೆ ನಡೆಸಿದಿರಂತೆ. ಆದರಯ್ಯೋ ! ನಿಮ್ಮ ಕಲ್ಪನೆಯ ಭಾರತ ಇದಾಗಿರಲಿಲ್ಲವ ತೆ. ನಿಮ್ಮ ಆಶಾಭಂಗವಾಯಿತಂತೆ ! ಭಾರತದ Intellectuals (ಬುದ್ಧಿಜಿ ವಿಗಳೆನ್ನೋಣವೇ ?) ತಮ್ಮ ಸುತ್ತಮುತ್ತಣ Squalor ಅನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲವೆಂದೋ ಏನೋ ರೇಗಿದ ನೀವು 'ಇದು ನನಗೆ ಮನೆಯಲ್ಲ !' ಎಂದು ಕೂಗಿ ಇಂಗ್ಲೆಂಡಿಗೆ ಗಾಡಿ ಬಿಟ್ಟರಂತೆ.

ಈ ಸುದ್ದಿಯನ್ನು ಕೇಳಿ ಅಳಬೇಕೋ ನಗಬೇಕೋ ತಿಳಿಯಲಿಲ್ಲ.

ನಿಮ್ಮ ಅವಗಾಹನೆಗಾಗಿ ಹೇಳಬೇಕೆಂದರೆ ನಾವು ಪೋಪರ ಹೃನ್ಮನಗಳನ್ನು ಸೂರೆಗೊಂಡಿದ್ದೇವೆ. ಜಗತ್ತಿಗೆ ಪಂಚಶೀಲಗಳನ್ನು ದಯಪಾಲಿಸಿದ್ದೇವೆ. ವಿಶ್ವದ ಆಶಾಜ್ಯೋತಿಗಳಾಗಿದ್ದೇವೆ.

ಮಾರ್ಷಲ್ ಟಿಟೋ, ಕೃಶ್ಚೇವ್, ನಾಸೆರ್ ಹಾಗೂ ಇನ್ನೂ ಅನೇಕರ ಸನ್ಮಿತ್ರರಾಗಿದ್ದೇವೆ. ಮಾರ್ಗದರ್ಶಕರೂ ಹೌದು.

ಇಡೀ ಜಗತ್ತಿಗೇ ಮಾರ್ಗದರ್ಶಕವಾದ ಜಗಜ್ಜ್ಯೋತಿಗಳನ್ನು ಬೆಳಗಿಸಿದ ಮತ ಸ್ಥಾಪಕರು ಕಡೆಯಪಕ್ಷ ನಮ್ಮಲ್ಲಿ ಎರಡು ಡಜನ್ನಿಗೆ ಕಮ್ಮಿಯಿಲ್ಲ.

ಹೀಗೆಂದು ನಾವು ಜಂಬ ಕೊಚ್ಚಿಕೊಳ್ಳುತ್ತಿಲ್ಲ. ಇವೆಲ್ಲವೂ ಸತ್ಯ ಸಂಗತಿಗಳು.

ಆದರೂ ನಮ್ಮಲ್ಲಿ ಉತ್ತಮರಾದವರು ಹಲವರ ಹೊಗಳಿಕೆಗಳನ್ನೂ ಕೆಲವರ ತೆಗಳಿಕೆಗಳನ್ನೂ ಗಮನಿಸದೆ ನೀರಿನಲ್ಲಿರುವ ಪದ್ಮಪತ್ರದಂತೆ ಇದ್ದುಬಿಡುತ್ತಾರೆ. ಆದರೆ ನನ್ನಂತಹ ಅಸಹನ ಶೀಲರಿಗೆ, ಹೊಗಳಿದಾಗ ಉಬ್ಬುವುದೂ ತೆಗಳಿದಾಗ ಕುಗ್ಗುವುದೂ ಸ್ವಭಾವ.

ನಿಮಗೆ ಭಾರತದ ಬುದ್ಧಿ ಜೀವಿಗಳ ಸಂಪರ್ಕವಿರಬಹುದೆಂಬ ಸಂಶಯ ನಾನು ಓದಿದ ಸುದ್ಧಿ (ಅಥವಾ ಟೀಕೆ) ಯಿಂದ ಬಂತು. ಆ ಪತ್ರಿಕೆಯಲ್ಲಿ ಯಾವ ಬುದ್ಧಿ ಜೀವಿಗಳು ಎಂಬ ವಿವರವಿರಲಿಲ್ಲ.

'Intellectual' ಎಂದು ಯಾರಿಗೆ ನೀವು ಅನ್ನುತ್ತೀರಿ ಎನ್ನುವುದು ತಿಳಿಯಲಿಕ್ಕೊಲ್ಲದು. ಜನಸಾಮಾನ್ಯರ ಮಟ್ಟಿಗೆ ಆಡೆನ್ನರ ಅಭಿಪ್ರಾಯದಲ್ಲಿ Intellectual ಎಂದರೆ ಅರ್ಥ A man who is unfaithful to his wife.

ನಮ್ಮ ದೇಶದಲ್ಲಿ ಎರಡು ಮುಖ್ಯ ರೀತಿಗಳಿವೆ. ಅಧಿಕ ಪ್ರಸಾರವಿರುವ ಪತ್ರಿಕೆಗಳಲ್ಲಿ ಮತ್ತೆ ಮತ್ತೆ ಬರೆಯುವ, ದೊಡ್ಡ ದೊಡ್ಡ ವಿಶ್ವವಿದ್ಯಾಲಯಗಳಲ್ಲಿ ಭಾರೀ ಹುದ್ದೆಗಳಲ್ಲೂ, ಭಾರೀ ಕಂಪನಿಗಳಲ್ಲಿದ್ದು ಯಶಸ್ವೀ Executive ಹುದ್ದೆಗಳಲ್ಲಿರುವವರು ಒಂದು ರೀತಿಯ ಇಂಟಲೆಕ್ಚುಯಲ್ಸ್.

ಇದ್ದಕ್ಕಿಂದ್ದಂತೆ ನಾಯಿಕೊಡೆಗಳಂತೆ ಉದ್ಭವಿಸುವ ಪ್ರಗತಿಪರ ಪುರೋಗಾಮಿ ಲೇಖಕರು, ಪತ್ರಕರ್ತರು ಹಾಗೂ ಚಲಚ್ಚಿತ್ರರಂಗದವರದು ಇನ್ನೊಂದು ರೀತಿ. ಇವರು ಇದ್ದಕ್ಕೆ ಇದ್ದ ಹಾಗೆ ನ್ಯಾಷನಲ್ ಅವಾರ್ಡ್ ಹೊಡೆಯಬಲ್ಲರು.

ಇಬ್ಬರಿಗೂ ನಿಮ್ಮ ವರ್ಣನೆ ಅನ್ವಯಿಸುವುದಿಲ್ಲ, ಹೊಲಸು ವಿಚಾರ ಧಾರೆ, ಹೊಲಸು ಬರವಣಿಗೆಗಳಿಗೆ ನಮ್ಮಲ್ಲೇನು ಕಡಿಮೆ ! ಹಾಗೆ ಕೇಳಿದರೆ ಯಾವ ದೇಶದಲ್ಲಿ ಏನು ಕಡಿಮೆ ? ನೀವು ಇಂಗ್ಲೆಂಡಿನಲ್ಲಿ ನೆಲಸುವಿರಲ್ಲಾ ಅಲ್ಲಿ ಬುದ್ಧಿ ಜೀವಿಗಳೆಲ್ಲಾ 'ಹೊಲಸ'ನ್ನೇ ಅಕೌಂಟಿಗೆ ತೆಗೆದುಕೊಳ್ಳುತ್ತಾರೇನು ? ಆ ಕೆಲಸ ಮಾಡುವುದಕ್ಕೆ ನಮ್ಮ ದೇಶವೇನು ಪರದೇಶವೇನು ?

ಭಾರತದಲ್ಲಿ ನೀವು ಏನನ್ನು ಬಯಸಿ, ಏನನ್ನು ನಿರೀಕ್ಷಿಸಿ, ಇಲ್ಲಿಗೆ ಬಂದಿರಿ.

ಬರುವುದಕ್ಕೆ ಮೊದಲು ನನಗೇಕೆ ತಿಳಿಸಲಿಲ್ಲ ? ನೀವು ಎಲ್ಲಿದ್ದಿರಿ ? ಬೊಂಬಾಯೇ, ಕಲ್ಕತ ವೇ, ಖುಲ್ನಾವೇ ? ಮುಗಿಲುಹಳ್ಳಿಗೆ ಬಂದಿದ್ದಿರಾ ? ಇಲ್ಲಿ ಬುದ್ಧಿಜೀವಿಗಳ ವಿಚಾರಧಾರೆ ವಾಗ್ಧಾರೆಗಳೆರಡೂ ಹೊಲಸೇ ?

ನಿಮ್ಮ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಲಿಲ್ಲವೊ ? ನಿಮ್ಮನ್ನು ಕಂಡು ಸಾಷ್ಟಾಂಗವೆರಗಿ ಪುರಸ್ಕಾರ ಮಾಡುವವರು ಸಿಗಲಿಲ್ಲವೋ ? ಯಾರಾದರೂ ನಂಬಿಸಿ ಕೈಕೊಟ್ಟರೋ ಏನು ಸಮಾಚಾರ !

ಪರದೇಶಕ್ಕೆ ಹೋಗವ ಮೊದಲು ಸರಿಯಾಗಿ ಆಲೋಚಿಸದೆ, ಸರಿಯಾದ ಧ್ಯೇಯವಿಲ್ಲದೆ, ಧ್ಯೇಯಸಾಧನೆ ಮಾಡುವ ದಾರಿಯನ್ನರಿಯದೆ, ಬಂದರೆ ಏನೆನು ತ್ತಾರೆ ಗೊತ್ತೇ ಬುದ್ಧಿ, ದುಬ್ಬ! ಎನ್ನುತ್ತಾರೆ.

ಪ್ಯಾಸ್ಟರ್‌ನ್ಯಾಕ್, ಬೇರೆ ಯಾವ ದೇಶಕ್ಕೂ ಹೋಗಲಿಲ್ಲ. ಹಾಲ್ಡೇನ್ ನಮ್ಮ ದೇಶಕ್ಕೆ ಬಂದರು. ನಮ್ಮ ದೇಶದ ಪದ್ಧತಿಗಳನ್ನು ಬೈದರು. ಆದರೆ ಮತ್ತೆ ಇಂಗ್ಲೆಂಡಿಗೆ ಓಡಿಹೋಗಲಿಲ್ಲ. ಏಕೆಂದರೆ ಅವರು ಹೊಲಸನ್ನು ತೊಳೆಯುವ ಉದ್ಯಮದಲ್ಲಿ ತೊಡಗಿದರು.

ನಮ್ಮ ದೇಶದಲ್ಲಿ ನಿಮ್ಮ ಮಿತ್ರರಿಗೆ ಕೊರತೆಯಿಲ್ಲ, ಆದರೆ ನಿಮ್ಮ ಮಿತ್ರರಾರು ಎಂದು ನೀವು ಸರಿಯಾಗಿ ಯೋಚಿಸಲಿಲ್ಲ.

ನಿಮ್ಮಂತಹವರಿಗೂ ನಮ್ಮಲ್ಲಿ ಕೊರತೆಯಿಲ್ಲ. ಇಂಗ್ಲೆಂಡಿಗೋ, ಅಮೇರಿಕಕ್ಕೋ ಹೋಗಿ, ಆ ದೇಶಗಳನ್ನು ನಂದನ ವನಗಳೆಂದೂ, ಭಾರತದಲ್ಲಿ ಚರಂಡಿಯ ನಾತವಲ್ಲದೆ ಇನ್ನೇನೂ ಇಲ್ಲವೆಂದೂ ಹೇಳುವ ಮಂದಿ ಬಹಳ. ಆದರೆ ಹಾಗೆ ಹೇಳುವ ಮೊದಲು ತಾವು ಕಡಿದು ಕಟ್ಟೆ ಹಾಕಿದ್ದೇನು ಎಂದು ಯೋಚಿಸುವುದಿಲ್ಲ.

ಭಾರತ ಬಹಳ ವಿಶಾಲ ಹೃದಯದ ದೇಶ. ಶತೃಗಳ ಹೆಜ್ಜೆಯ ಜಾಡಿನಲ್ಲೇ ಕಾಲಿಡುವ ದೇಶದ್ರೋಹಿಗಳನ್ನೂ ತನ್ನಲ್ಲಿ ಒಳಕೊಂಡ ದೇಶ.

ಹೀಗಿರುವಲ್ಲಿ ನಿಮ್ಮ ಸಮಾನ ಶೀಲ ವ್ಯಸನಗಳುಳ್ಳ ಮಿತ್ರರು ಇಲ್ಲಿ ನಿಮಗೆ ಸಿಕ್ಕದಿದ್ದುದು ಆಶ್ಚರ್ಯ. ಹಾಗೆ ಸಿಕ್ಕರೂಕೂಡ, ನೀವು ಇಂಗ್ಲೆಂಡಿಗೇ ಹೋಗುವ ಹಠ ಸಾಧಿಸಿದ್ದ ಪಕ್ಷದಲ್ಲಿ ನೀವು ಈ ಎರಡರಲ್ಲಿ ಒಂದಾಗಿರಬೇಕು.

(೧) ಭಾರತವ ನಿಂದನೆಮಾಡಿ ಪುಸ್ತಕ ರಚಿಸು ಎಂದು ಹೇಳಿದ ಪ್ರಕಾಶಕರ ಏಜಂಟರು!

(೨) ಕಂತ್ರಿ!

ಆದರೂಕೂಡಾ ನಿಮ್ಮಿಂದ ಭಾರತಕ್ಕೆ ಒಂದು ಅನುಕೂಲವಾಗಬೇಕಾಗಿದೆ. ನಿಮ್ಮಂತಹವರು ಯಾರಾದರೂ ಈ ದೇಶದಲ್ಲಿ ನೆಲೆಸಲು ಬಂದರೆ ಅವರಿಗೆ 'ಬೇಡ' ಎಂದು ಹೇಳಿ.

ಭಾರತದ ಬಗೆಗೆ ನಿಮ್ಮ ಅಭಿಪ್ರಾಯ ಬದಲಿಸಿ, ಮತ್ತೆಂದಾದರೂ ನೀವು ಇಲ್ಲಿಗೆ ಬರುವ ಸಂಭವ ಉಂಟಾದರೆ, ನನಗೆ ತಿಳಿಸದೆ ಬರಬೇಡಿ.

ಕನ್ನಡ ನಿಮಗೆ ತಿಳಿಯದೆಂಬುದನ್ನು ಬಲ್ಲೆ. ನಿಮ್ಮ ಅಭಿಪ್ರಾಯ ನನಗೆ ಹೇಗೆ ತಿಳಿಯದೋ, ನನ್ನ ಭಾಷೆ ನಿಮಗೆ ಹಾಗೆಯೇ ತಿಳಿಯದೆ ಹೋದರೆ ಏನು ನಷ್ಟ! ಎಂದು—

—ಅ. ರಾ. ಸೇ.

ಬಾಲ ಸನ್ಯಾಸಿ

ಬೋಳಾಜಿಯ ಪ್ರವೇಶ

★

ನಮ್ಮೂರಿನಲ್ಲಿ ಈಗ ಮನೆ ಮನೆಗಳಲ್ಲಿ ಜನಮನವನ್ನು ಆಳುತ್ತಿರುವುದು ರಾಜಕೀಯ ಧುರೀಣರಲ್ಲ; ಸಿನಿಮಾ ನಕ್ಷತ್ರಗಳಲ್ಲ; ಬೋಳಾಜಿ! ಎಲ್ಲರ ಬಾಯಲ್ಲಿಯೂ ಬಾಲ ಸನ್ಯಾಸಿ ಬೋಳಾಜಿಯ ಮಹಿಮೆಯೇ, ಬೋಳಾಜಿಯ ಪವಾಡಗಳೇ. ಎಲ್ಲರ ಗೋಡೆಗಳ ಮೇಲೂ ಬೋಳಾಜಿಯ ಪಟಗಳೇ. ಎಲ್ಲರೂ ಬೋಳಾಜಿ ಇರುವ ಊರಿಗೆ ಒಂದು, ಎರಡು, ಮೂರು, ನಾಲ್ಕು ಬಾರಿ ಯಾತ್ರೆ ಮಾಡಿ ಬಂದವರೇ. ಬೋಳಾಜಿಯಲ್ಲಿ ಇನ್ನೂ ಶ್ರದ್ಧೆ ಹುಟ್ಟದಿದ್ದ ಹತ್ತಾರು ಮನೆಗಳವರನ್ನು ಎಲ್ಲರೂ ಕನಿಕರಿಸುವವರೇ. ಬೋಳಾಜಿಯ ಮಹಿಮೆಯನ್ನು ವರ್ಣಿಸಿ, ಹೆಚ್ಚು ಹೆಚ್ಚು ಮಂದಿಯನ್ನು ಅವನ ಭಕ್ತರನ್ನಾಗಿ ಮಾಡಿ ಆ ಭಕ್ತವೃಂದದ ವೃದ್ಧಿ ಅಭಿವೃದ್ಧಿಗೆ ಕಾರಣರಾಗುವುದೇ ಒಂದು ಮಹಾ ಪುಣ್ಯಕಾರ್ಯವೆಂದು ನಂಬಿರುವ ಜನರು, ಬೋಳಾಜಿಯ ಕುರಿತು ಅಸಡ್ಡೆ ತೋರಿಸುವವರಲ್ಲಿ ಶ್ರದ್ಧೆ ಹುಟ್ಟಿಸಲು ಮಹಿಮಾ ವರ್ಣನೆ, ಭಯಭೀತಿಗಳ ಉತ್ಪಾದನೆ, ಮುಂತಾದ ಸಾಧನಗಳಿಂದ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಆದರೆ ಬೋರ್ಕಲ್ಲ ಮೇಲೆ ನೀರು ಸುರಿದಂತೆ, ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ ಆಯಿತೇ ವಿನಾ ಕೆಲವರಿಗೆ ಬೋಳಾಜಿಯಲ್ಲಿ ಶ್ರದ್ಧೆ ಹುಟ್ಟಲೇ ಇಲ್ಲ. ಅಂಥ ಸಣ್ಣ ಗುಂಪಿನಲ್ಲಿ ಕಾಶೀಪತಿ ತಾನೂ ಒಬ್ಬ ಎಂದು ಬಹಳ ಹೆಮ್ಮೆ ಪಟ್ಟುಕೊಂಡಿದ್ದ. ಆದರೆ ಆತನ ಹೆಮ್ಮೆ ಬಹಳ ಕಾಲ ಉಳಿಯಲಿಲ್ಲ. ಬೋಳಾಜಿ ಆತನ ಮನೆಯ ಮೇಲೂ ಧಾಳಿ ಮಾಡಿದ. ಆ ಸಮಾಚಾರವನ್ನೇ ಮುಂದೆ ಹೇಳುತ್ತಿದ್ದೇನೆ.

ಕಾವತ್ತೆ ಕಾಶೀಪತಿಯ ಹೆಂಡತಿಗೆ ಹೇಗೋ ದೂರದಿಂದ ಅತ್ತೆಯಾಗಬೇಕು. ಅವರ ಹೆಸರು ಕಾವೇರಿ ಇದ್ದಿರಬೇಕು. ಅದು ಚುಟುಕಾಗಿ 'ಕಾವು' ಆಯಿತು. 'ಕಾವತ್ತೆ' ಆಯಿತು.

ಒಂದೆರಡು ವರ್ಷಗಳಿಗೊಮ್ಮೆ ಕಾವತ್ತೆ ತಮ್ಮ ಆಪ್ತೇಷ್ಟರ ಮನೆಯಲ್ಲಿ ಪ್ರತ್ಯಕ್ಷರಾಗಿ ಒಂದೆರಡು ವಾರ ಇದ್ದು ಹೋಗುವುದು ಕ್ರಮ. ಸರಿ ಕಾಶೀಪತಿಯ ಮನೆಯಲ್ಲಿ ಮೊನ್ನೆ ಕಾವತ್ತೆಯವರ ಉದಯವಾಯಿತು.

ಕಾವತ್ತೆ ಬಂದರೆಂದರೆ ಮನೆಯಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಕಾವೇರುವುದೆಂದೇ ಲೆಕ್ಕ. ಆದ್ದರಿಂದಲೇ ಕೆಟ್ಟಕೆಟ್ಟದಾಗಿ ವ್ಯಾಕರಣ ಕಲಿತ ಹುಡುಗರು ಕಾವಿರುವ

ಅತ್ತೆ—ಕಾವತ್ತೆ ಅಥವಾ ಕಾವೇರಿದ ಅತ್ತೆ—ಕಾವತ್ತೆ ಎಂದೆಲ್ಲ ಅರ್ಥಕಟ್ಟುತ್ತಿದ್ದವು. ಅದರಲ್ಲೂ ತಪ್ಪಿಲ್ಲ. ಆ ಅತ್ತೆ ಯಾವುದೇ ವಿಷಯದ ಕುರಿತು ಮಾತನಾಡತೊಡಗಿದರೆಂದರೆ ಕಾವಿಲ್ಲದಿರುವುದೆಂದಿಲ್ಲ. ಪ್ರೈಮರಿತು ವಾದಿಸುವ ಅವರು ಕಾವೇರಿದ ಅತ್ತೆಯೇ ಸರಿ. ಇತ್ತೀಚೆಗಂತೂ ಅವರು ಬೋಳಾಜಿಯ ಪರಮ ಭಕ್ತೆಯಾಗಿದ್ದಾರೆ.

ಕಾವತ್ತೆ ಪ್ರವೇಶಿಸುವುದೆಂದರೆ ಬೋಳಾಜಿಯೂ ಹೊಕ್ಕಂತೆಯೇ. ತಾವು ಹೋದ ಕಡೆಗೆಲ್ಲ ಕಾವತ್ತೆ, ಬೋಳಾಜಿಯ ಪಟವನ್ನು ಒಯ್ಯುತ್ತಿದ್ದರು. ದೇವರ ಕೋಣೆಯಲ್ಲಿ ದೇವರ ಪಟಗಳ ಪಕ್ಕದಲ್ಲಿ ಬೋಳಾಜಿಯ ಪಟ ಬಂದು ಕೂತಿತೆಂದರೆ ಕಾವತ್ತೆ ಹಾಜರಾಗಿದ್ದಾರೆಂತಲೇ ಅರ್ಥ!

ಅಂತೆಯೇ ದೇವರ ಕೋಣೆಯಲ್ಲಿ ಬೋಳಾಜಿಯ ಪಟವನ್ನು ಕಂಡಾಗಲೇ ಕಾವತ್ತೆಯ ಆಗಮನವಾಗಿದೆಯೆಂದು ಕಾಶೀಪತಿಗೆ ತಿಳಿಯಿತು. ಇನ್ನೇನು ಬೋಳಾಜಿಗೆ ಪೂಜೆ ಪುನಸ್ಕಾರ ನೈವೇದ್ಯ ಮಂಗಳಾರತಿ ಅದ್ದೂರಿಗಳು ಪ್ರಾರಂಭವಾದಹಾಗೆಯೇ ಎಂದುಕೊಂಡ. ಎಲ್ಲಿಯ ಕಾಟ ಬಂತಪ್ಪ ಎನಿಸಿದರೂ ಕಾವತ್ತೆ ಬರುವಾಗಲೆಲ್ಲ ಸಂಗಡ ಹೊತ್ತು ತರುವ ಸೊಗಸಾದ ಹಸುವಿನ ತುಪ್ಪ, ಹಪ್ಪಳ, ಉಪ್ಪಿನಕಾಯಿ, ಬೆಣ್ಣೆ, ಚಕ್ಕುಲಿ ಈ ಬಾಬ್ತುಗಳನ್ನೆಲ್ಲ ನೆನೆಸಿಕೊಂಡು ಅವನಿಗೆ ಸ್ವಲ್ಪ ಸಮಾಧಾನವಾಯಿತು, ಈ ಉಪಾಯದಿಂದಲೇ ಕಾವತ್ತೆಗೆ ಬೋಳಾಜಿಯ ಸಮೇತ ಎಲ್ಲೆಲ್ಲಿಯೂ ಪ್ರವೇಶ ದೊರಕುತ್ತಿದ್ದಿರಬೇಕು. ಆದ್ದರಿಂದಲೇ ಅವರ ಬೋಳಾಜಿಯ ಆರಾಧನೆಗೆ ಕಾಶೀಪತಿ ಅಡ್ಡಿ ಬರುತ್ತಿರಲಿಲ್ಲ. ಬೋಳಾಜಿ ತಮಗೆ ನಿದ್ರೆಯಲ್ಲಿ ದರ್ಶನ ಕೊಟ್ಟಿದ್ದೇ ಮೊದಲಾದ ಪವಾಡಗಳನ್ನು ಕಾವತ್ತೆ ವರ್ಣಿಸುತ್ತಿದ್ದರೆ, ಮನೆಯವರೆಲ್ಲ ದೀಪ ಆರಿಸಿಕೊಂಡು ಅದನ್ನೆಲ್ಲ ಕೇಳಿದಂತೆ ನಟಿಸುತ್ತಿದ್ದರು.

ಆದರೆ ಈಸಲ ಕಾವತ್ತೆ ಬಂದಾಗ ಒಂದು ಸೋಜಿಗ ಸಂಭವಿಸಿತು. ಕಾಶೀಪತಿಯ ಹೆಂಡತಿಯ ಕೈ ಗಡಿಯಾರ ಕೆಟ್ಟುಹೋಗಿ ಬಹಳ ಸಮಯವಾಗಿತ್ತು. ಅದನ್ನು ಕಾಶೀಪತಿ ರಿಪೇರಿಗೆ ಕೊಟ್ಟುಬಂದಿದ್ದ. ವಾಚ್ ರಿಪೇರಿ ನರಸಯ್ಯ ಕಾವತ್ತೆ ಬಂದ ಮೂರನೇ ದಿನವೇ ಪೇಟೆಗೆ ಹೋಗಿದ್ದ ನಾಣಿಯೊಡನೆ ಹಿಂದೆ ಕಳುಹಿಸಿದ್ದ-ಸರಿಮಾಡಿಯಲ್ಲ-ಮೊದಲಿನ ಸ್ಥಿತಿಯಲ್ಲಿಯೇ. ಅದನ್ನ ಬಿಚ್ಚಿ ನೋಡಿಯಾಯಿತೆಂದೂ, ಅದರ ಅಂಗಾಂಗಳೆಲ್ಲೆಲ್ಲ ಊನವಿರುವುದೆಂದೂ, ಅದನ್ನು ರಿಪೇರಿ ಮಾಡುವುದಕ್ಕಿಂತ ಹೊಸತೊಂದು ಕೊಂಡುಕೊಳ್ಳುವುದೇ ವಾಸಿಯೆಂದೂ ಹೇಳಿ ಕಳುಹಿಸಿದ್ದ. ನಾಣಿ ಅದನ್ನು ತಂದವನು ಬೋಳಾಜಿಯ ಪಟವಿದ್ದ ಮೊಳೆಯಲ್ಲೇ ನೇತುಹಾಕಿದ್ದ. ವಾಚು ಮೊದಲಿದ್ದ ಸ್ಥಾನ ಅದೇ ಆಗಿತ್ತು.

ಕಾವತ್ತೆ ಸ್ನಾನಮಾಡಿ ಬರುವಾಗ ಬೋಳಾಜಿಯ ಪಟದಮೇಲೆ ವಾಚು ತೂಗಾಡುವುದನ್ನ ಕಂಡು ಹೌಹಾರಿದರು. "ಯಾರ್‍ರೋ ಇದು" ಎಂದು ಆಕೆ ಒಳ್ಳೇ ಕಾವಿನಿಂದ ಕಿರಿಚುವಷ್ಟರಲ್ಲಿ ಕಾಶೀಪತಿಯ ಹೆಂಡತಿ ಬಂದು ಬೇಗನೆ ವಾಚನ್ನು ಅಲ್ಲಿಂದ

ತೆಗೆದಳು, ಕಾವತ್ತೆ ದೇವರು ದಿಂಡರಮೇಲೆ ಗೌರವವಿಲ್ಲದ ಮಕ್ಕಳನ್ನು ಟೀಕಿಸುತ್ತಲೇ ಇದ್ದರು. ಇತ್ತ ಮೀನಾಕ್ಷಿ ಅಭ್ಯಾಸಬಲದಿಂದಲೋ ಏನೋ ವಾಚನ್ನು ಕಿವಿಗೆ ಹಿಡಿದು ನೋಡಿದಳು, ಕಳೆದ ಒಂದು ವರ್ಷದಲ್ಲಿ ಅವಳು ಎಷ್ಟೋ ಸಲ ಆ ಪುರಾತನ ವಾಚನ್ನು ಅದೇ ಮೊಳೆಯಿಂದ ತೆಗೆದು ನೋಡಿದ್ದುಂಟು. ಆದರೆ ಯಾವತ್ತೂ ಅದು ಸದ್ದು ಮಾಡಿದ್ದಿಲ್ಲ. ಆದರೆ ಇದೇನು ಸೋಜಿಗ! ಇವತ್ತು ಟಿಕ್ ಟಕ್ ಎನ್ನುತ್ತಿದೆ!

ಮೀನಾಕ್ಷಿಯ ಮುಖ ಇಷ್ಟಗಲವಾಯಿತು. 'ವಾಚು ನಡೀತಿದೇಂದ್ರೆ' ಎನ್ನುತ್ತಾ ಗಂಡನಿದ್ದಲ್ಲಿಗೆ ಹೋದಳು.

"ರಿಪೇರಿ ನರಸಯ್ಯ ವಾಚನ್ನು ಬಿಚ್ಚಿ ನೋಡಿದವನು ಎಣ್ಣೆಗಿಣ್ಣೆ ಬಳಿದಿದ್ದನೋ ಏನೋ ಆಕ್ಸಿಜನ್ ಕೊಟ್ಟಂತಾಗಿ ಕುಟುಕು ಜೀವ ಒಂದಷ್ಟು ಹೊತ್ತು ಹೊಡ ಕೊಳ್ಳುತ್ತೋ ಏನೋ" ಎಂದ ಕಾಶೀಪತಿ.

ಅಷ್ಟರಲ್ಲಿ ಅಲ್ಲಿಗೆ ಬಂದ ಕಾವತ್ತೆ ವಾಚಿನ ಸ್ಥಿತಿಗತಿಗಳನ್ನೆಲ್ಲ ಕೇಳಿ ತಿಳಿದು ಈಗ ತಿಳೀತು ಎಂದರು. ಮತ್ತೆ ಪ್ರಾರಂಭಿಸಿದರು "ಅಲ್ಲವೇ, ನೀನು ಆ ಗಡಿಯಾರಾನ ಇಟ್ಟಿದ್ದೆಲ್ಲಿ ಅಂತ ಜ್ಞಾಪಿಸಿಕೊ. ಬೋಳಾಜಿ ಭಗವಾನನ ಸ್ಪರ್ಶಕ್ಕೆ ಕಲ್ಲುಕೂಡ ಜೀವ ತುಂಬಿಕೊಳ್ಳುತ್ತೆ ಕೊರಡು ಕೂಡ ಕೊನರುತ್ತೆ ಕಣೆ. ಅಂದಮೇಲೆ ಗಡಿಯಾರಕ್ಕೆ ಜೀವ ಬಂದಿದ್ದರಲ್ಲೇನಾಶ್ಚರ್ಯ!"

ಮೀನಾಕ್ಷಿ ಒಂದು ತರದ ಭ್ರಾಂತಿಗೋ ದಿಗ್ಭ್ರಾಂತಿಗೋ ಒಳಗಾದಳು. 'ನಾಣೀ' ಎಂದು ಕೂಗಿದಳು ನರಸಯ್ಯನ ಅಂಗಡಿಯಿಂದ ವಾಚು ತರುವಾಗ ನಡೀತಾ ಇತ್ತೇನೋ?" ಎಂದ ವಿಚಾರಿಸಿದಳು "ಇಲ್ಲಮ್ಮ" ಎಂದ ಆತ.

"ಮತ್ತೆ ಈವಾಗ ನಡೆಯೋದು ಹೇಗೇಂದ್ರೆ?" ಎಂದು ಗಂಡನೊಡನೆ ತನ್ನ ಬೆರಗನ್ನು ತೋಡಿಕೊಂಡಳು.

ಕಾಶೀಪತಿ ಪುಸ್ತಕದಿಂದ ತಲೆ ಮೇಲೆತ್ತದೆ "ಸಾಕು ನಿನ್ನ ಬೆರಗು...ಅದರಲ್ಲೇನೂ ಅದ್ಭುತವಿಲ್ಲ...ಅದು ಖಾಯಮ್ಮಾಗಿ ನಡೀತಾ ಇರುತ್ತೆ ಅಂತ ಹೇಗೆ ಗೊತ್ತು ನಿನಗೆ. ನರಸಯ್ಯ ಎಣ್ಣೆ ಸವರಿದ್ದರಿಂದ ಟಾಕ್ ಟೀಕ್ ಅಂತ ಹತ್ತು ಸಲ ಹೊಡಕೊಳ್ಳುತ್ತೆ ಅಷ್ಟೆ ಈಗಲೋ ಇನ್ನೊಂದು ಕ್ಷಣಕ್ಕೋ ಮತ್ತೆ ಮೌನವ್ರತ ಹಿಡೀದೇ ಇರೋದಿಲ್ಲ ಅದನ್ನ ಎಸೆದುಬಿಟ್ಟು ಬೇಕಿದ್ದರೆ ಇನ್ನೊಂದು ಕೊಂಡುಕೊಳ್ಳೋಣ ಆರನೆ ಪಂಚ ವಾರ್ಷಿಕ ಯೋಜನೆಯ ಕಾಲಕ್ಕೆ" ಎಂದು ಮತ್ತೆ ತನ್ನ ಓದಿನಲ್ಲಿ ಮುಳುಗಿದ.

ಅಷ್ಟರಲ್ಲಿ ಕಾವತ್ತೆ "ಅವನ ಮಾತು ಕೇಳಿ ಪ್ರಯೋಜನವಿಲ್ಲ...ಬಾ ಹೋಗೋಣ" ಎಂದು ಮೀನಾಕ್ಷಿಯನ್ನು ಒಳಗೆ ಕರೆದುಕೊಂಡು ಹೋದಳು ಬೋಳಾಜಿ ಭಗವಾನನ ಪವಾಡಗಳ ವರ್ಣನೆ ಬಹಳ ಸ್ಫೂರ್ತಿಯಿಂದ ಒಂದೇ ಸವನೆ ಹೊರಹೊಮ್ಮಿರಬೇಕು.

ಸಂಜೆ ಮೀನಾಕ್ಷಿ ಗಂಡನೊಡನೆ "ವಾಚು ಇನ್ನೂ ನಡೀತಾ ಇದೆ" ಎಂದಳು.

"ರಾತ್ರಿ ನಿಲ್ಲೋದು ಖಂಡಿತ" ಎಂದ ಕಾಶೀಪತಿ.

ಬೆಳಗ್ಗೆದ್ದು ಅವನೇ ವಿಚಾರಿಸಿದ.

"ಇನ್ನೂ ನಡೀತಾ ಇದೆ" ಎಂದು ಬಹಳ ಹಿಗ್ಗಿನಿಂದ ಉತ್ತರ ಬಂತು. ಅಲ್ಲೇ ಇದ್ದ ಕಾವತ್ತೆ ತುಂಬ ಭರವಸೆಯಿಂದ "ಅದು ಇನ್ನು ನಿಲ್ಲೋದಿಲ್ಲಪ್ಪ ಬೋಳಾಜಿ ಯನ್ನು ನಂಬಿದವರಿಗೆ " ಅಂತ ಏನೋ ಹೇಳುವಷ್ಟರಲ್ಲಿ ಕಾಶೀಪತಿ ಓಡಿಹೋಗಿ ತನ್ನ ಕೋಣೆ ಸೇರಿದ.

ಎಸೆದು ಬಿಡೋದೇ ವಾಸಿ ಅಂತ ನರಸಯ್ಯ ವಿಧಿಸಿದ್ದ ಈ ವಾಚು ಹೇಗೆ ಇಷ್ಟುಕಾಲ ನಡೆಯಿತೆಂಬುದು ಅವನಿಗೆ ದೊಡ್ಡ ಸಮಸ್ಯೆಯಾಯಿತು. ಏನಿದ್ದರೂ ಅದು ನಿಲ್ಲದೆ ಇರುವುದಿಲ್ಲ. ಸದ್ಯಕ್ಕೆ ಅದು ಮೀನಾಕ್ಷಿಯ ಮೇಲೆ ಮಂಕುಬೀರಿ ಕಾವತ್ತೆಯ ಪ್ರಭಾವವನ್ನು ಹೆಚ್ಚಿಸುವಂತಾಯಿತಲ್ಲ ಎಂದು ಆತ ಕೊರಗಿದ. ಇಲ್ಲ ಮೀನಾಕ್ಷಿಗೆ ಸರಿಯಾಗಿ ತಿಳಿಯ ಹೇಳಿ ಅವಳ ಬೋಳಾಜಿಯ ಕುರಿತಾದ ಭ್ರಮೆಯನ್ನು ಬಿಡಿಸಬೇಕೆಂದು ಆತ ಒಳಗೆ ಹೋದ. ಆದರೆ ಅಲ್ಲಿ ನೋಡಿದ್ದೇನು ? ಮೀನಾಕ್ಷಿ ಕಾವತ್ತೆಯನ್ನು ಕೂಡಿಕೊಂಡು ಬೋಳಾಜಿಯ ಫಟಕ್ಕೆ ತುಪ್ಪದ ದೀಪ ಇಟ್ಟು ತಲೆಬಾಗಿ ನಮಸ್ಕರಿಸುವ ದೃಶ್ಯ.

ಕಾಶೀಪತಿ ಅದನ್ನು ಕಂಡು ತಾಳ್ಮೆಗೆಟ್ಟು ಮೂಢರು.. ಮೂಢರು ಎಂದು ರೇಗಾಡಿದ. ಆದರೆ ಮೀನಾಕ್ಷಿ ಅದನ್ನ ಲಕ್ಷಕ್ಕೇ ತಂದುಕೊಳ್ಳದೆ "ನೀವು ಸ್ವಲ್ಪ ಆ ಕಡೆ ಹೋಗಿ ನೋಡೋಣ" ಎಂದಳು ತಣ್ಣಗೆ.

" ಆಂ ?" ಎಂದು ತಬ್ಬಿಬ್ಬಾದ ಕಾಶೀಪತಿ.

" ಹೌದು ಮಗು, ನಿನಗೂ ಒಂದು ದಿನ ಶ್ರದ್ಧೆ ಹುಟ್ಟುತ್ತೆ" ಎಂದರು ಕಾವತ್ತೆ ಮಹಾ ಪ್ರವಾದಿಯಂತೆ. ಕಾಶೀಪತಿ ಹಲ್ಲು ಕಡೆದು ತೆಪ್ಪಗೆ ತನ್ನ ಕೋಣೆ ಯನ್ನು ಸೇರಬೇಕಾಯಿತು

ಕೆಲವು ದಿನಗಳ ಮೇಲೆ ಕಾವತ್ತೆ ಬಹಳ ಹಿಗ್ಗಿನಿಂದ ಹೊರಟು ಹೋದರು. ಬೋಳಾಜಿಯ ಪಟವೊಂದು ಖಾಯಮ್ಮಾಗಿ ಆ ಮೋಳೆಯಲ್ಲೇ ನಿಂತಿತು. ಮೀನಾಕ್ಷಿಗೆ ದೀಕ್ಷೆ ದೊರೆತಿತ್ತು ಕಾವತ್ತೆಯಿಂದ.


ವಾಚು ಇನ್ನು ಸ್ವಲ್ಪ ಕಾಲ ನಡೆಯಿತು. ಆಮೇಲೆ ದಿನಕ್ಕೆ ಐದು ನಿಮಿಷ ಹತ್ತು ನಿಮಿಷ, ಹದಿನೈದು ನಿಮಿಷ, ಅರ್ಧ ಗಂಟೆ ಒಂದು ಗಂಟೆಯಂತೆ ಹಿಂದೆ ಬೀಳುತ್ತ ಕೊನೆಗೊಮ್ಮೆ ನಿಂತೇ ಹೋಯಿತು.

"ಕಂಡೆಯಾ" ಎಂದು ಬೋಳಾಜಿಯ ವಿವಾದವನ್ನು ಸುಳ್ಳು ಎಂದು ಸಾಧಿಸಲು ತೊಡಗಿದ.

ಆದರೆ ಆಕೆ ಹೇಳಿದ್ದಿಷ್ಟೆ. " ನೀವು ಸುಮ್ನಿರೀಂದ್ರೆ "

ಮೀನಾಕ್ಷಿ ರಾತ್ರಿ ಗುಟ್ಟಾಗಿ ಬೋಳಾಜಿಯ ಪಟದಮೇಲೆ ವಾಚನ್ನು ತೂಗ ಹಾಕಿ ನೋಡಿದಳು. ವಾಚು ಮತ್ತೆ ಸದ್ದು ಮಾಡಲಿಲ್ಲ. ಆದರೇನು, ಬೋಳಾಜಿಯ ಪಟ ಮಾತ್ರ ಅಲ್ಲಿಂದ ಕದಲಲಿಲ್ಲ. ಕಾಶೀಪತಿ ತರ್ಕಕ್ಕೆ ಹೊರಟರೆ ಕೇವಲ ಸುಮ್ಮನಿರಿ ಎಂದು ಆಕೆ ಅವನ ಬಾಯಿ ಮುಚ್ಚಿಸಿಬಿಡುತ್ತಾಳೆ. ಅವಳು ತರ್ಕದ ಸೀಮೆಯನ್ನು ದಾಟಿಹೋಗಿದ್ದಾಳೋ ಅಲ್ಲಿಂದ ಬಹಳ ಕೆಳಕ್ಕೆ ಉರುಳಿದ್ದಾಳೋ ಯಾರಿಗೆ ಗೊತ್ತು ! ಅಂತು ಕಾಶೀಪತಿಯ ಮನೆಯಲ್ಲಿ ಬೋಳಾಜಿ ತಳವೂರಿದ. ಆತ ಇನ್ನು ನಿರ್ಗಮಿಸುವುದುಂಟೆ ?

—ರಾ ಮಿ.



ಅರ್ಥಸಚಿವ ಟಿ. ಟಿ. ಕೆ. –

ಸರಕಾರಿ ಕ್ಷೇತ್ರದ ಭಾರಾನೆಲ್ಲಾ ನಾನೇ ಹೊತ್ತುಕೊಂಡಿದ್ದರೂ–
ಈ ಖಾಸಗೀ ಕತ್ತೆ ನಡೆಯೋದೇ ಇಲ್ಲವಲ್ಲ !!

ಕೊಕ್ಕರೆ ನರಿ ಕತೆ

ಒಂದೂರಿನ ಹತ್ತಿರದ ಕೊಳದಲ್ಲಿ ಒಂದು ಕೊಕ್ಕರೆ ಮನೆ ಮಾಡಿಕೊಂಡಿತ್ತಂತೆ. ಅದು ಮತ್ಸ್ಯ ಬ್ರಾಹ್ಮಣ ಜಾತಿ ಕೊಕ್ಕರೆಯಂತೆ. ಆ ಕೊಳದಲ್ಲಿ ದಿನಾಗಲೂ ತರಕಾರಿ ಸುಲಭವಾಗಿ ಸಿಗುತ್ತೆ ಅಂತ ಕಂಡುಕೊಂಡ ಆ ಕೊಕ್ಕರೆ, ತುಂಬಾ ಹಣವನ್ನು ಕೊಟ್ಟು ಕೊಳದ ಹತ್ತಿರವೇ ಇದ್ದ ಒಂದು ಸೈಟು ಕೊಂಡು ಪುಟಾಣಿ ಮನೆಯನ್ನು ಕಟ್ಟಿಸಿ ಕೊಂಡಿತ್ತಂತೆ. ಬೆಳಿಗ್ಗೆ ಎದ್ದು ಕೊಳದಲ್ಲಿ ಸ್ನಾನಮಾಡಿ, ಒದ್ದೆಯಾಗಿಯೇ ಜಪ ಮಾಡುತ್ತಿತ್ತಂತೆ. ಜಪಮಾಡುತ್ತಾ ಕಣ್ಣುಗಳನ್ನು ಅರ್ಧ ಮುಚ್ಚಿಕೊಂಡಿರುವಾಗ ಹತ್ತಿರ ಏನಾದರೂ ದಾರಿ ತಪ್ಪಿ ಮೀನು ಬಂದರೆ ಗಬಕ್ಕಂತ ಅದನ್ನು ದೊಡ್ಡ ಕೊಕ್ಕಿನಿಂದ ಕಬಳಿಸಿ ನುಂಗಿಬಿಡುತ್ತಿತ್ತಂತೆ. ಬೆಳಗಿನ ಫಲಾಹಾರ ಆಯಿತು, ಪೂಜೆ ಮಾಡಿಸಿಕೊಂಡ ದೇವರು ಹೊಟ್ಟೆಗೆ ಆಹಾರ ನೀಡಿದ, ಅಂತ ಸಂತೋಷಪಟ್ಟು, ದೇವರ ದಯಾಮಯತೆಯನ್ನು ಕೊಂಡಾಡುತ್ತಾ ಇತ್ತಂತೆ ಮಧ್ಯಾಹ್ನ ಮತ್ತು ಸಾಯಂ ಕಾಲವೂ ಸ್ನಾನ ಮಾಡಿ, ಇದೇ ರೀತಿ ದೇವರ ಪೂಜೆ ಮಾಡಲು ಅರೆಕಣ್ಮುಚ್ಚಿ ಧ್ಯಾನಿ ಸುತ್ತಾ, ಧ್ಯಾನಿಸುತ್ತಾ, ದೇವರು ಕೊಟ್ಟಿದ್ದನ್ನು ಉಂಡು ಬಾಳನ್ನು ಸಾಗಿಸುತ್ತಾ ಇತ್ತಂತೆ.

ದೇವರು ಅಂದರೆ ಈ ಕೊಕ್ಕರೆ ಎಷ್ಟು ಭಕ್ತಿಯಿಂದ ಪೂಜೆ ಮಾಡುತ್ತೆ ಎಂದು ಕೊಳದ ಬಳಿಯ ಪ್ರಾಣಿಗಳೆಲ್ಲಾ ಸೇರಿ, ಕೊಕ್ಕರೆ ಕೊಕ್ಕರೆ ನೀನೇ ನಮ್ಮೂರಿನ ಶ್ಯಾನುಭೋಗನಾಗು, ಲೆಕ್ಕಪತ್ರ ಎಲ್ಲವನ್ನೂ ನಿನ್ನಂತಹ ನಿಸ್ಪೃಹ ವ್ಯಕ್ತಿ ನೋಡಿ ಕೊಂಡರೆ, ನಮಗೂ ಮೋಸ ಆಗುಲ್ಲ. ಸರಕಾರದಲ್ಲೂ ಭಷಾವಣೆ ನಡೆಯುಲ್ಲ ಅಂತ ಕೇಳಿಕೊಂಡುವಂತೆ. ಜನಸೇವೆಯೇ ಸರಕಾರದ ಸೇವೆ; ಸರಕಾರದ ಸೇವೆಯೇ ಜನಾರ್ದನನ ಸೇವೆ ಎಂದು ಕೊಕ್ಕರೆಯು ಘೋಷಿಸಿ, ಶ್ಯಾನುಭೋಗಿಕೆಯನ್ನು ಒಪ್ಪಿಕೊಂಡಿತಂತೆ.

ಅದೇ ಕೊಳದ ಆಚೆ ದಡದಲ್ಲಿ ಆರಂಭವಾದ ಕಾಡಿನಲ್ಲಿ ಒಂದು ನರಿ ವಾಸವಾಗಿ ತ್ತಂತೆ. ಆ ಗಂಡು ನರಿ ಹುಲಿ ಸಿಂಹಗಳ ಹಿಂದೆ ನಾಯಿಯಂತೆ ಅಲೆದು ಅವುಗಳು ತಿಂದು ಮಿಕ್ಕ ಎಂಜಲನ್ನೇ ಪುಡಾರಿಗಳಂತೆ ತಿಂದು ಹೊಟ್ಟೆ ಹೊರೆದುಕೊಳ್ಳುತ್ತಿತ್ತಂತೆ. ದಿನಾಗಲೂ ಕೊಳದಲ್ಲಿ ನಿಂತು ಸುಲಭವಾಗಿ ಜೀವನ ನಡೆಸುತ್ತಿದ್ದ ಕೊಕ್ಕರೆಯನ್ನು ನೋಡಿ ಅದಕ್ಕೆ ಅಸೂಯೆ ಉಂಟಾಯಿತಂತೆ.

ಈ ಕಾಡಿನಲ್ಲಿ ಹುಲಿ ಸಿಂಹಗಳ ತರಹ ನಾನು ಎಂದಿಗೂ ಧೀರ ಬಾಳು ನಡೆಸುವುದಕ್ಕೆ ಆಗುವುದಿಲ್ಲ. ಈ ಕೊಕ್ಕರೆಯನ್ನಾದರೂ ಆಶ್ರಯಿಸಿ ಅದರ ಸ್ನೇಹ ಪಡೆದು ಊರಿನಲ್ಲಿ ತಿರುಗಾಡುವ ಹಾಗೆ ಮಾಡಿಕೊಳ್ಳಬೇಕು. ಆಮೇಲೆ ಊರಿನ ಮನೆಗಳಲ್ಲಿ ಸ್ವಂತ ಷಿಕಾರಿ ಮಾಡಿ ಕೋಳಿ, ಹುಂಜಗಳನ್ನು ತಿನ್ನಲು ಏರ್ಪಾಡು ಮಾಡಬೇಕು ಎಂದು ಯೋಚಿಸಿತಂತೆ.

ಸರಿ ! ಯೋಚನೆ ಹೊಳೆದಿದ್ದೇ ತಡ. ಕಾರ್ಯರೂಪಕ್ಕೆ ತರಬೇಕು ಪುಡಾರಿಗೆ ಹೇಳಿಕೊಡಬೇಕೇ ? ಅದೂ ನರಿಯಂತಹ ಜಾಣ ಪುಡಾರಿಗೆ ಕಾರ್ಯಕ್ರಮ ತಿಳಿಯದೇ.

ಒಂದು ಬೆಳಿಗ್ಗೆ ಕೊಳದಲ್ಲಿ ಸ್ನಾನ ಮಾಡುಕ್ಕೆ ಅಂತ ನರಿ ಹೋಯಿತು. ಸ್ನಾನ ಮಾಡಿ ವಿಭೂತಿ ಧರಿಸಿ ಸೂರ್ಯನಿಗೆ ಅರ್ಘ್ಯ ಅರ್ಪಿಸಿತು. ಹೀಗೆ ನಾಲ್ಕೈದು ದಿನಗಳಾದಮೇಲೆ, ಕೊಕ್ಕರೆಯ ಬಳಿ ಹೋಗಿ "ಆಚಾರ್ಯರೇ ! ಇವತ್ತು ನಮ್ಮ ಮನೆಯಲ್ಲಿ ಹಿರಿಯರ ಪುಣ್ಯದಿನ. ತಮ್ಮಂತಹವರು ಆಗಮಿಸಿ ನನ್ನ ಆತಿಥ್ಯವನ್ನು ಸ್ವೀಕರಿಸಿ, ನಮ್ಮ ಹಿರಿಯರಿಗೆ ಗತಿಕಾಣಿಸಬೇಕು. ಎಂದು ಬೇಡಿಕೊಂಡಿತಂತೆ. ಹೊಗಳುಭಟ್ಟ ನರಿಯ ಮಾತುಗಳನ್ನು ಕೇಳಿ ಕೊಕ್ಕರೆಯ ರೆಕ್ಕೆಗಳೆಲ್ಲವೂ ಹಿತವಾಗಿ ನಿಮಿರಿ ನಿಂತುವಂತೆ.

"ಆಗಲಿ ನರಿರಾಯ, ಮಧ್ಯಾಹ್ನ ಅಪರಾಹ್ಣದ ಹೊತ್ತಿಗೆ ತಿಥಿಗೆ ಬರುತ್ತೇನೆ" ಎಂದು ಒಪ್ಪಿಕೊಂಡಿತಂತೆ.

ಆ ದಿನ ನರಿ ಬಹಳ ಮುತುವರ್ಜಿ ವಹಿಸಿ, ಪಾಯಸ, ಒಬ್ಬಟ್ಟು ಮಾಡಿಸಿ. ದೊಡ್ಡ ದೊಡ್ಡ ಅಗ್ರದ ಬಾಳೆ ಎಲೆ ತರಿಸಿ ಅಣಿ ಮಾಡಿತಂತೆ. ಕೊಕ್ಕರೆ ಬಂತು. ಮಡಿಯಾಗಿ ಮಾಡಿದ್ದ ನರಿಯ ಏರ್ಪಾಡನ್ನೆಲ್ಲಾ ನೋಡಿ ಸಂತೋಷಗೊಂಡಿತು. ನರಿರಾಯ ! ಈಗಿನ ಕಾಲದಲ್ಲೂ ಕೂಡ, ಮಡಿ ಮೈಲಿಗೆ ತಿಥಿ, ತದ್ದಿನ, ಅಂತ ಹಳೆ ಸಂಪ್ರದಾಯಗಳನ್ನು ನಡಸಿಕೊಂಡು ಬರುತ್ತಿದ್ದೀಯಲ್ಲ ನಿನ್ನಂತಹವರು ಇದ್ದರೆ ನಮ್ಮ ರಾಜ್ಯ ರಾಮರಾಜ್ಯವೇ ಆಗುತ್ತೆ ಎಂದು ಹೇಳಿತಂತೆ. ಆಮೇಲೆ ಊಟಕ್ಕೆ ಕುಳಿತುಕೊಂಡಿತಂತೆ.

ಬಾಳೆಲೆ ಹಾಕಿದರು. ಪಾಯಸ, ಅನ್ನ ಸಾರು ಒಬ್ಬಟ್ಟು ಎಲ್ಲಾ ಬಡಿಸಿದರು. ಪಾಪ ! ಕೊಕ್ಕರೆಗೆ ಕತ್ತುಬಗ್ಗಿಸಿ ಕುಕ್ಕಿ ತಿನ್ನಲು ಸಾಧ್ಯವೇ ಆಗಲಿಲ್ಲ. ಆ ಊಟ ಮುಗಿದು ತಾಂಬೂಲ ದಕ್ಷಿಣೆ ತೊಗೊಂಡಾಗ, ಕೊಕ್ಕರೆ ಹೊಟ್ಟೆ (ಖಾಲಿಯಾಗಿ) ಚುರು ಚುರು ಅಂತ ಉರಿಯುತ್ತಿತ್ತು.

"ತುಂಬಾ ತೊಂದರೆ ತೊಗೊಂಡಿರಿ, ನರಿರಾಯರೇ, ಹಸಿದಿದ್ದೀರಿ. ನಿಮ್ಮ ಭೋಜನ ಆದಮೇಲೆ ನಾನು ಹೊರಡುತ್ತೇನೆ, ಉಂಡು ಸುಧಾರಿಸಿಕೊಂಡಹಾಗೂ ಆಗುತ್ತೆ" ಎಂದು ಕೊಕ್ಕರೆ ಹೇಳಿತಂತೆ. ಈ ಊಟಾನ ನರಿ ಹೇಗೆ ತಿನ್ನುತ್ತೆ. ನೋಡೋಣ ಅಂತ ಕೊಕ್ಕರೆಗೂ ಆಸೆ.


ನರಿ ಕೂತುಕೊಂಡು ಪುಷ್ಕಳವಾಗಿ ಊಟ ಮಾಡಿತಂತೆ. ಕೊಕ್ಕರೆಯ ಹೊಟ್ಟೆ ಅಗ್ನಿಷ್ಟಿಕೆಯಂತಾಯಿತಂತೆ. ಆದರೂ ಹುಸಿ ನಗೆ ಸೂಸುತ್ತಾ ಆಶೀರ್ವಾದ ಮಾಡಿ ತನ್ನ ಮನೆಗೆ ಹಿಂತಿರುಗಿತಂತೆ.

ದಾರಿಯುದ್ದಕ್ಕೂ ಆ ನರೀಗೆ ಬುದ್ಧಿ ಕಲಿಸಬೇಕು, ಆದರಮೇಲೆ ಸೇಡು ತೀರಿಸಿ ಕೊಳ್ಳಬೇಕು ಎಂದು ಕೊಕ್ಕರೆ ಯೋಚಿಸಿತಂತೆ.

ಬಂತು ಊರೋತ್ಸವ, ಶ್ಯಾನುಭೋಗ ಕೊಕ್ಕರೆಗೆ ಅವಕಾಶ ಸಿಕ್ಕಿತು ನರಿರಾಯನನ್ನು ಹಬ್ಬದ ಊಟಕ್ಕೆ ಕರೆಯಿತಂತೆ.

ಆಮೇಲೆ ಗೊತ್ತಲ್ಲ ! ಸಣ್ಣ ಕತ್ತಿರುವ ಉದ್ದಾನೆ ಹೂಜಿಗಳಲ್ಲಿ ಮೀನಿನ ವಡೆ, ನೀರುಬಾಳೆ ಬೋಂಡ, ಇತ್ಯಾದಿಗಳನ್ನು ಬಡಿಸಲಾಯಿತಂತೆ. "ನಮ್ಮ ಊರಿನ ಹಬ್ಬ. ಕಾಡಿನಲ್ಲಿ ಇಂತಹ ಊಟ ಕಂಡೇ ಇರುಲ್ಲ. ತಿನ್ನು ನರಿರಾಯ" ಎಂದು ಕೊಕ್ಕರೆ ಹೇಳುತ್ತಾ, ತಾನು ಕಂಠಪೂರ್ತಿ ನುಂಗಿತಂತೆ. ಹಸಿದ ಹೊಟ್ಟೆಯಲ್ಲಿ ತಾಂಬೂಲ, ಗಂಧ ತೊಗೊಂಡು ನರಿ ಹಿಂತಿರುಗುವಾಗ, ಊರ ಶ್ಯಾನುಭೋಗರ ಚಿಲ್ಮೀಷವನ್ನು ಮನಸಾ ಬೈಯುತ್ತಾ, ಇನ್ನು ಮೇಲೆ ಇಂತಹವರ ಸಹವಾಸ ಮಾಡಲೇ ಬಾರದು ಎಂದು ತೀರ್ಮಾನಿಸಿತಂತೆ.

ಅದಕ್ಕೇ ನೋಡಿ, ಮಕ್ಕಳಿರಾ ! ನರಿ ಕೊಕ್ಕರೆ ಇವತ್ತಿಗೂ ದ್ವೇಷ ಸಾಧಿಸುತ್ತಲೇ ಇವೆ, ಶ್ಯಾನುಭೋಗ ಪುಡಾರಿ ತರಹಾನೇ ಎಂದು ಅಜ್ಜಿ ನವ್ಯಗತೆಯನ್ನು ಹೇಳಿದಳಂತೆ.



ಇವರೇನೆ ! ಮೊನ್ನೆ ಕಾರ್ಪೊರೇಷನ್ ಚುನಾವಣೇಲಿ ಭಾಷಣ ಮಾಡಿ ಹೊಡೆಸಿಕೊಂಡೋರು !

ಗೃಹಣಿಯ ಕವನಗಳು

ಹಾರೆಗೆ :—

ನೆಚ್ಚಿನ ಗೆಳತಿಯೇ ! ಕೆಚ್ಚೆದೆಯ ಹಾರೆಯೇ !
ಬೆಚ್ಚದಿರು, ನೀ, ಬೆದರದಿರು.
ಚುಚ್ಚುತಲಿದ್ದರೂ ಚದುರದಿರು.

ಸೊಟ್ಟ ಮೂತಿಯ ಪುಟ್ಟಿಯು ನಿನ್ನಿಂದ
ಕುಟ್ಟಿದಳೇನಮ್ಮಾ ! ಮೆಣಸಿನ ಕಾಯಿ !
ಕೆಟ್ಟಿತೇ ನಿನ್ನಾ " ಬದನಾರವಿಂದ " !
ಕುಟ್ಟಿದೆಯಾ ಬೆರಳವಳ ! ಕೊಟ್ಟೆಯಾಪೆಟ್ಟ !

ತೆಂಗನು ತಿಂದೆಯಾ ? ಉಪ್ಪನು ಮೆದ್ದೆಯಾ ?
ಇಂಗನು ತಿಂದಾ ಮಂಗನಂತಾದೆಯಾ ?
ಸಿಂಗರಿಸಿದರೇನೇ ? ಸೋನೂ ಘೊಂಡುಗಳು,
ಭಂಗಾರ ಸಣ್ಣದವಲಕ್ಕಿ ಭತ್ತದಲಿ !

ಏಳೀಗ ಮೈತೊಳವೆ. ನೋಡಮ್ಮ ಬೆಲ್ಲ !
ಎಳಸಾದ ಯಾಲಕ್ಕಿ. ಘಂಮಘಂಮ ಎಷ್ಟೆಲ್ಲ !
ಹೋಳು ಕೊಬ್ಬರಿ ಕೊಡುವೆ, ಸಾಕಾಯಿತಲ್ಲ !
ಬೇಳೆ ಹೂರಣ ಮಾಡಿ ಮಂದಿಗೆ ತಿನಿಸಮ್ಮ.

—ಟಿ ಸುನಂದಮ್ಮ.

೨

— ಗೋಧಿಗೆ —

ಯುದ್ಧ ಯುಗದಲಿ ಬದ್ಧ ಕಂಕಣನಾಗಿ
ಸಿದ್ಧನಾದ ನೀ, ಕೊನೆಗೆ ಮುದ್ದೆಯೂ ಆಗಿ
ಉದ್ಧಾರ ಮಾಡಿದೆಯಾ, ನೇಗಿಲಿನ ಯೋಗಿಯಾ ?
ಕನ್ನೆಯರ, ಕುನ್ನಿಗಳ. ಹಸಿವಿಂಗೆ ಆದೆಯಾ ?

ಕೇಜಿಯು ಪಡಿಭತ್ಯ ! ನಮಪಾಲ ಬಾಗಿನ !
ನಮ ನಮ್ಮ ಸರಕಾರ ಕ್ಯೂ ನಿಲಿಸಿ ಕೊಟ್ಟಿದನ
ಭೋಜನಕು ನೀನೇ ಗತಿ ! ವ್ಯಂಜನಕು ನೀನೇ !
ಭುಂಜನದ ಆಧಾರ ನೀನೇ ! ಗೋಧೀ ರಾಜ !

ಚಪಾತೀ, ಎಲೆ ಚಪಾತಿ !!
ಎಲ್ಲೆಡೆಯು ನೀನಿರುತಿ !
ಪದರ ಪದರವ ತೋರಿ,
ಅಧರದಲಿ ನೀರ್‌ತರುತಿ.
ಅಧರವನು ದಾಟಿದಗೆ,
ಉದರವನು ಬಾಧಿಸುತಿ !

ಬೆಳಗಾದರೆ ಬೇಯುವೆ—ಬ್ರೆಕ್‌ಫಸ್ಟು ! ರವೆಗಂಜಿ
ಹೊಳೆಗಾದರೂ ಹೋಗುವೆ—ಪಿಕ್‌ನಿಕ್ಕು !—ಬ್ರೆಡ್ಡು
ಹಗಲಿನ ಊಟಕ್ಕೆ ಡೈಯಟ್ ! ಗೋಧಿಯಾ ಅನ್ನ.
ರಾತ್ರಿಗೂ ಅದುವೇನೇ ! ಪಥ್ಯ ! ಕಟುನಿಟ್ಟು !

—ಟಿ. ಸುನಂದಮ್ಮ

(ಐದನೆಯ) ಮಗುವಿಗೆ

ಕವಲುಗಾಲಿನ ತರಳೆ
ಲಿವರು ಗೆಡ್ಡೆಯ ಹಸುಳೆ
ಯಾಕಿಂತು ಅಳುತಿರುವೆ !
ಏನು ಬೇಕೇ ? ಬೊಗಳೆ !

ತುರುಕಲೇನೆ ರಬ್ಬರಿನ ನಿಪ್ಪಲನ !
ಪಲುಕಲೇನೆ ಗೋಳ್‌ಗೀತ ಕೀಳ್‌ಕವನ.
ತೂಗಲೇ ತೊಟ್ಟಿಲಿನ, ಜಗ್ಗಲೇ ಹಗ್ಗವನ.
ಕೂಗಲೇ ಗುಮ್ಮನ್ನ, ಗುಮ್ಮ ಮುಸುಡಿ ಅಪ್ಪನ್ನ,
ಕದಡಿಕೊಡಲೇ ಡೂಮೆಕ್ಸ್ ? ಪ್ರಾಚೀನ ಕರ್ಮ !
ಮುದುಡಿ ಮಲಗೆಲೆ, ನನ್ನ ಪ್ರಾರಬ್ಧ ಕರ್ಮ !

ಉಳಿದ ಬೇಬಿಗಳು, ನಾಲ್ಕು, ಬಾಸುಂಡೆ ತಿಂದಿವೆ,
ಬಳುವಳಿಯು ಬೇಕೇನೆ, ಬಿಸಿ ಬಿಸಿ ಉಂಡೆಗಳು !

—ಟಿ. ಸುನಂದಮ್ಮ

ಕಿವುಡನನ್ನು ಹಾಡು ಎಂದು ಕೇಳಲಿಲ್ಲರು
ಸವಿಯ ನಗೆಯ ಸೂಸುತವನು ಬಾಯಿಬಿಟ್ಟನು
" ಎರಡು ದೋಸೆ ಮೂರು ಬೆಣ್ಣೆ
ಒಂದು ವಡೆ ಅರ್ಧ ಕಾಫಿ
ಸಾಕು !—ಹಬ್ಬದ ಊಟ ಆಯಿತೆಂದು " ನಕ್ಕುಬಿಟ್ಟನು.

* * * *

ಹೂವೀಳ್ಯಕ್ಕೆಂದು ಬಂದು ಕುಳಿತು ಇದ್ದಳು
ಶಕೆಯ ಹವಾ ಒಗ್ಗದೆನಗೆ ! ಬೇಗ ಕಳಿಸಿ, ಎಂದಳು
ಮತ್ತೆ ಯಾಕೆ ತಂಬಿಟ್ಟು
ಅಷ್ಟು ತಿಂದೆ ತಾಯೆ ! ಎಂದು
ಮನೆಯ ಆಕೆ ಈಕೆಯನ್ನು ಕೇಳಿಬಿಟ್ಟಳು

ಸೈಕಾಲಜಿ ಚಿಕಿತ್ಸೆ

ರಾಮಪುರದಲ್ಲಿ ಗುಲ್ಲೋಗುಲ್ಲು. ನಮ್ಮ ಭೀಮಮಾವ ನಾಗತ್ತೆಯ ಒಬ್ಬಳೇ ಮಗಳು ವಿಮಲಳ ಮೊದಲನೇ ಕೂಸಿಗೆ ಮೊದಲ ಹುಟ್ಟಿದ ಹಬ್ಬ. ಸಂಭ್ರಮವೋ ಸಂಭ್ರಮ. ರಾಮಪುರದ ಬೃಹತ್ ಮನೆಯು ತುಂಬ ನೆಂಟರಿಷ್ಟರು ಕಿಕ್ಕಿರಿದು ತುಂಬಿದ್ದಾರೆ. ಮನೆಯ ಎಲ್ಲಾ ಉಪ್ಪರಿಗೆಗಳಲ್ಲೂ ಮೂಲೆಗಳಲ್ಲೂ ಜನರು ಭರ್ತಿಯಾಗಿದ್ದಾರೆ. ಟೋಕಿಯೋ ಒಲಿಂಪಿಕ್ಸ್‌ನಲ್ಲಿ ನೆರೆದಷ್ಟು ಜನ! ನಾನೂ ಶೌರಿ ಎರಡು ದಿನಗಳ ಮುಂಚೆಯೇ ಹಾಜರಾಗಿದ್ದೆವು. ಹಿಂದೆ ಮೈಸೂರು ನವರಾತ್ರಿಯಲ್ಲಿ ನಮ್ಮ ನಾಗತ್ತೆಗೂ, ನನಗೂ ಮತ್ತು ಶೌರಿಗೂ ಮುತ್ತಿನ ಸರದ ದರೋಡೆ ವಿಷಯದಲ್ಲಿ ಏರ್ಪಟ್ಟಿದ್ದ ಪರಸ್ಪರ ಸ್ನೇಹವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲು ನಾವಿಬ್ಬರೂ ರಾಮಪುರಕ್ಕೆ ಬಂದು ಬಹಳ ಚುರುಕಾಗಿದ್ದೆವು. ನನಗೆ ಮಾಮೂಲಿನಂತೆ ಮೊದಲು ಪ್ಪರಿಗೆಯ ಮೇಲೆ ಕೋಣೆಯೂ ಇತ್ತು.

ಮನೆಯಲ್ಲಿನ ಈ ಗಲಾಟೆಯ ಜೊತೆಗೆ ಊರಲ್ಲಿ ಕಾಮನ ಹಬ್ಬದ ಸಂಭ್ರಮ ಬೇರೆ. ಎಲ್ಲೆಲ್ಲಿ ನೋಡಿದರೂ ಬಣ್ಣ, ವೇಷ, ಕುಣಿತ ರಾಮಪುರದಲ್ಲೆಲ್ಲಾ ದೊಡ್ಡ ಮನೆ ಎಂದಮೇಲೆ, ಎಲ್ಲಾ ವೇಷಗಳೂ ಭೀಮಮಾವನ ಮನೆಯ ಮುಂದೆ ಬರಲೇಬೇಕು! ಹಾಗಾಗಿ ಒಂದು ನಿಮಿಷವೂ ಪುರುಸೊತ್ತಿಲ್ಲದೆ ಕಾಲ ಕಳೆದುಹೋಗುತ್ತಿತ್ತು. ನಾನೂ ಶೌರಿ, ಹುಟ್ಟಿದ ಹಬ್ಬದ ಹಿಂದಿನ ದಿನವೇ ಅಖಾಡಾದಲ್ಲಿ ಸೇರಿದ್ದೆವು. ಹುಣಸೂರು ಶೀನಿಯೂ ಇದ್ದ. ಹೆಬ್ಬೂರಿನಿಂದ ಭಾಗೀರತೀ ಚಿಕ್ಕಮ್ಮ ಬಂದಿದ್ದರು. ಬೆಂಗಳೂರಿಂದ ತ್ರಿವೇಣಮ್ಮ, ಮೈಸೂರಿಂದ ಡಾಕ್ಟರ್ ಬಾಳಾಜೀರಾಯನ ಪರಿವಾರ ಎಲ್ಲರೂ ಸೇರಿದ್ದರು.

ರಾತ್ರಿ ಊಟಕ್ಕೆ ಕುಳಿತಿದ್ದೆವು.

“ನಾಳೆ ಹನ್ನೊಂದು ಘಂಟೆಗೆ ಡಾಕ್ಟರ್ ಭುಜಂಗರಾಯರು ಬರ್ತಾರೆ.” ಅಂತ ಡಾಕ್ಟರ್ ಬಾಳಾಜೀರಾಯನ ಪರಿವಾರದವರೊಬ್ಬರ ಬಾಯಿಂದ ಹೊರಬಿತ್ತು.

“ಛೆ! ನಿಧಾನವಾಗಿ ತಿನ್ನೋ! ಹಾಗೇ ಉಸಿರು ಸಿಕ್ಕಿಹಾಕಿಕೊಂಡು ಹರೋಹರ ಅಂದೀಯೆ!”—ಅನ್ನುತ್ತಾ ನನ್ನ ತಲೆಯಮೇಲೆ ಒಂದು ಲೋಟ ತಣ್ಣೀರು ಸುರಿದ ನನ್ನ ಪಕ್ಕದಲ್ಲಿ ಊಟಕ್ಕೆ ಕುಳಿತಿದ್ದ ಶೀನಿ.

ಪ್ರಾಯಶಃ ಡಾಕ್ಟರ್ ಭುಜಂಗರಾಯರ ಹೆಸರು ನನ್ನ ಕಿವಿಗೆ ಬಿದ್ದ ತಕ್ಷಣ, ನನ್ನ ಗಂಟಲೊಳಗಿದ್ದ ತುತ್ತು ಹಾದಿ ತಪ್ಪಿ, ಎಲ್ಲೋ ವಾಯುರಂಧ್ರಕ್ಕೆ ಪ್ರವೇಶಿಸಿರ ಬಹುದು! ರಾತ್ರಿ ಅಂತೂ ಊಟ ಮುಗಿಸಿ, ನನ್ನ ಕೋಣೆಯನ್ನು ಪ್ರವೇಶಿಸಿದಾಗ, ನನ್ನ ಮನಸ್ಸಿನ ನೆಮ್ಮದಿ ಅಷ್ಟೇನೂ ಹೇಳಿಕೊಳ್ಳುವಷ್ಟಿರಲಿಲ್ಲವೆನ್ನಬಹುದು. ಏನೋ ಒಂದು ಕಳವಳ. ಚೈನಾದವರು ಆಟಂಬಾಂಬ್ ತಯಾರಿಸಿದ್ದೇವೆ. ಅಂತ ಹೇಳಿದ ಮೇಲೆ, ಆ ಆಟಂ ಬಾಂಬನ್ನು ಯಾವಾಗ ಸ್ಫೋಟಿಸುತ್ತಾರೋ ಅಂತ ಅವರ ಅಕ್ಕ ಪಕ್ಕದ ಜನರು ಕಳವಳ ಪಡುತ್ತಿದ್ದ ಸ್ಥಿತಿ ನನ್ನ ಆ ರಾತ್ರಿಯ ಸ್ಥಿತಿ ಒಂದೇ ಆಗಿತ್ತು.

" ಶೌರೀ, " ಅಂದೆ

" ಸರ್ "?

" ಹೌದು. ಆದರೆ ನನಗೆ ಅವರನ್ನು ಎದುರಿಸಲು ಇಷ್ಟವಿಲ್ಲ ಶೌರಿ." ಅಂದೆ.

ಈ ಡಾಕ್ಟರ್ ಭುಜಂಗರಾಯರಿಗೂ ನನಗೂ ಬೆಳೆದುಕೊಂಡು ಬಂದಿರುವ ಸಂಬಂಧವನ್ನು ನೀವು ಇದುವರಿವಿಗೂ ಸರಿಯಾಗಿ ಅನುಸರಿಸಿದ್ದರೆ, ನನ್ನ ಮನಸ್ಸಿನ ಕಳವಳ ನಿಮಗೆ ಅರ್ಥವಾದೀತು. ಯಾವ ಜನ್ಮದ ಕರ್ಮದಿಂದಲೋ, ಇದೇ ಡಾಕ್ಟರ್ ಭುಜಂಗರಾಯ, ತನ್ನ ಮಗಳನ್ನು ನನಗೆ ಕೊಟ್ಟು ಮದುವೆ ಮಾಡಲು ಇಷ್ಟಪಟ್ಟು ನನ್ನ ವರ ಪರೀಕ್ಷೆ ನಡೆಸಿದ. ಅವರ ಪರೀಕ್ಷೆ, ಶಿಂಗ್ರುವಿನ P.U.C. ತರಹ ಅಸಲೀ ಪರೀಕ್ಷೆ, ಸಪ್ಲಿಮೆಂಟರೀ ಪರೀಕ್ಷೆ, ಕಾಂಪ್ಲಿಮೆಂಟರೀ ಪರೀಕ್ಷೆ, ಎಕ್ಸ್ಟ್ರಾ ಸಪ್ಲಿಮೆಂಟರೀ ಪರೀಕ್ಷೆ ಹಾಗೆಲ್ಲಾ ನಡೆದು ಕಡೆಗೆ ನನ್ನ ಮೆದುಳು ಸರಿಯಾಗಿಲ್ಲ ಅಂತ ರಿಸಲ್ಟ್ ಹೊರಬಿತ್ತು. ಮದುವೆ ತಪ್ಪಿ ನನ್ನ ಬಿಡುಗಡೆಯಾಯ್ತು. ಆದರೂ ಆ ಡಾಕ್ಟರ್ ಭುಜಂಗರಾಯ ಅಂತ ಹೆಸರು ಕೇಳಿದರೆ ಆಗುವ ನನ್ನ ಮನಸ್ಸಿನ ಕಳವಳ ಹಾಗೇ ನಿಂತಿತು.

" ನನಗೆ ಆ ಡಾಕ್ಟರ್ ಭುಜಂಗರಾಯರನ್ನು ಭೇಟಿಮಾಡುವ ಇಷ್ಟವಿಲ್ಲ ಶೌರಿ " ಅಂದೆ

" ಹಾಗಾದರೆ ಪಟ್ಟಣಕ್ಕೆ ವಾಪಸಾಗೋಣವೆ ಸರ್ "?

ಯೋಚಿಸಿದೆ. ಫಲಾಯನ ಮಾಡುವುದು ಸಮರಶಾಸ್ತ್ರದಲ್ಲಿ ಒಂದು ಮಹತ್ವಾದ ಪ್ರಯೋಗವಾದರೂ ಅದು ನಿತ್ಯಜೀವನದಲ್ಲಿ ಶುದ್ಧ ಅಂಜುಬುರುಕುತನ!

" ಅದು ಶುದ್ಧ ಅಂಜುಬುರುಕುತನ ಶೌರಿ. ಇಲ್ಲೇ ಇದ್ದು, ವೇಷ ಬದಲಾಯಿಸಿಕೊಂಡು, ಡಾಕ್ಟರ್ ಭುಜಂಗರಾಯರನ್ನು ರಾಜಾರೋಷವಾಗಿ ಎದಿರಿಸ್ತೇನೆ. " ಅಂದೆ.

" ಎಂತಹ ವೇಷ ಸರ್ "? ಅಂತ ಕೇಳಿದ ಶೌರಿ.

ಆಗಲೇ ನನಗೆ, ಕೆಳಗೆ ಬೀದಿಯಲ್ಲಿ ಬಾರಿಸುತ್ತಿದ್ದ ತಮಟೆ ಕೇಳಿ ಬಂದದ್ದು.

" ಶೌರಿ ಬಾ ಹೋಗೋಣ. ಎಲ್ಲೆಲ್ಲೂ ಕಾಮನ ಹಬ್ಬದ ವೇಷಗಳು ಕುಣಿದಾಡ್ತಾ ಇವೆ. ಏನಾದರೂ ಹೊಳೆಯಬಹುದು " ಅನ್ನುತ್ತಾ ಶೌರಿಯನ್ನು ಎಳೆದುಕೊಂಡು, ಪೇಟೆ ಸೇರಿದೆ.

ಎಲ್ಲೆಲ್ಲೂ ಪಂಜುಗಳ ಬೆಳಕಿನಲ್ಲಿ ಕೂಗಾಟ, ಕುಣಿತಗಳು ನಡೆಯುತ್ತಿದ್ದವು. ನಾನು ಕೋಣೆಯಿಂದ ಆಲಿಸಿದ ತಮಟೆ ಶಬ್ದವನ್ನು ಹುಡುಕಿ ಕಂಡುಹಿಡಿದು, ಆ ಪಂಗಡದವರ ಕುಣಿತವನ್ನು ನೋಡುತ್ತ ನಾನು, ಶೌರಿ ನಿಂತೆವು. ನೋಟದ ಹಿತದ ಜೊತೆಗೆ ನಾನು ಸಿಗರೇಟಿನ ಹಿತವನ್ನೂ ಅನುಭವಿಸುತ್ತ ನಿಂತಿದ್ದೆ. ಸಿಗರೇಟಿನ ಹಿತ ಇನ್ನೂ ಆರನೆಯ ದಂ ಮುಟ್ಟದಲ್ಲಿದ್ದಾಗ ನನ್ನ ಬೆನ್ನಿನ ಮೇಲೆ ಬಲವಾದ ಗುದ್ದು ಬಿತ್ತು. ತಿರುಗಿದೆ.

ಶೀನಿ !

"ಹೇಗಿದ್ದೀಯಯ್ಯಾ ಹರಿ ? ಈ ನಿಶಿರಾತ್ರೀಲಿ ಹೊರಟಿದ್ದೀಯೋ ! ಎಲ್ಲಯ್ಯಾ ಒಂದು ಸಿಗರೇಟ್ ತಾರಯ್ಯ...ಥ್ಯಾಂಕ್ಸ್ ಊಟ ಮಾಡುವಾಗ ನಿನ್ನ ಉಸಿರೇ ಸಿಕ್ಕಿ ಹೋಯ್ತೇನೋ ಅಂದುಕೊಂಡಿದ್ದೆ...ಓಹೋ ! ಶೌರಿ ! ಏನಪ್ಪಾ ಯಜಮಾನನಿಗೆ ಬಾಡಿಗಾರ್ಡೇನೋ ! "

ನನಗಂತೂ ತುಂಬಾ ಕೋಪ ಬಂತು.

" ಎಲ್ಲಿಗೆ ಹೋದರೂ ನಿನ್ನ ಶನಿಕಾಟ ತಪ್ಪಿಲ್ಲ ! ನೀನು ಸೀನಿ ಅಲ್ಲ ಶನಿ ! ಇದೇಕಿಲ್ಲಿ ನಿಂತಿದ್ದಿ ?" ಅಂದೆ.

" ಸುಮ್ಮನೆ ಈ ಕುಣಿತ ನೋಡ್ತಿದ್ದೆ ಹರಿ ನಿನಗೆ ಜ್ಞಾಪಕವಿದೆಯೋನೋ ನಮ್ಮ ಎರಡನೇ ವರ್ಷ ಮೆಟ್ರಿಕ್‌ನಲ್ಲಿ ನಾನು, ನೀನು, ಪುಟ್ಟು, ಪೀಟರ್ ಇದೇ ವೇಷ ಧರಿಸಿ, ಇದೇ ರೀತಿ ತಮಟೆ ಬಾರಿಸಿ, ಫ್ಯಾನ್ಸಿ ಡ್ರಸ್ಸಿನಲ್ಲಿ ಪ್ರೈಜ್ ಹೊಡೆದಿದ್ದು ?"

ಹರಿಯ ಮಾತು ಕೇಳಿದ ತಕ್ಷಣ ನನಗೂ ಆ ತಮಟೆಗೂ ಇದ್ದ ಅಂತರಂಗದ ಅರ್ಥವಾಯ್ತು. ಹೌದು. ನಾನು, ಸೀನಿ, ಪುಟ್ಟುರಾಮು, ಪೀಟರ್ ಇದೇ ರೀತೀಲಿ ಕಪ್ಪು ಬಣ್ಣ ಬಳಿದುಕೊಂಡು, ಮೊಣಕಾಲುಗಳ ಮೇಲೆ ಕಚ್ಚೆ ಪಂಚೆ ಧರಿಸಿ, ಮೇಲೆ ಕೇವಲ ವ್ಯಾಸ್‌ಕೋಟ್ ಧರಿಸಿ, ತಲೆಗೆ ಕೆಂಪು ಲಪ್ಪಟೆ ಸುತ್ತಿ, ತಮಟೆ ವಾದ್ಯಕ್ಕೆ ಸರಿಯಾಗಿ ಕುಣಿದಿದ್ದೆವು. ಪುಟ್ಟು ತಮಟೆ ಬಾರಿಸಿದ್ದ, ಎರಡು ತಿಂಗಳು ಅಭ್ಯಾಸ ಮಾಡಿದ್ದೆವು ರಾತ್ರಿ ಸಮಯದಲ್ಲಿ ಕುಕ್ಕನಳ್ಳಿ ಕೆರೆ ಏರಿಮೇಲೆ. ನಮ್ಮ ನಾಲ್ಕು ಜನಕ್ಕೂ ಸೇರಿ ಒಂದು ಅಲ್ಯೂಮಿನಿಯಂ ಟಿಫಿನ್ ಕ್ಯಾರಿಯರ್ ಬಹುಮಾನ ಬಂದಿತ್ತು.

" ಶೀನಿ ಆ ಅಲ್ಯುಮಿನಿಯಂ ಕ್ಯಾರಿಯರ್ ಎಲ್ಲೋ " ಅಂತ ಕೇಳಿದೆ.

ಅದನ್ನ ಪೀಟರ್ ಗೆ ಕೊಟ್ಟೆವಲ್ಲಯ್ಯಾ ನಮಗೆಲ್ಲಾ ಅದಕ್ಕೆ ಬದಲಾಗಿ ತಲಾ ಒಂದೊಂದು ಪ್ಯಾಕು ಪಾಸಿಂಗ್‌ಷೋ ಕೊಡಿಸಿದ !"

ಹೌದು ಜ್ಞಾಪಕಕ್ಕೆ ಬಂತು. ಘಾಟಿ ಪೀಟರ್ !

"ಪೀಟಿ ಈಗಲೂ ನನಗನ್ನಿಸುತ್ತೋ ಯಾಕೆ ಯಾವುದಾದರೂ ವೇಷ ಹಾಕ್ಕೊಳ್ಳಬಾರದು ಅಂತ !"

"ಹಥಿ ನೀನು ಯಾವ ವೇಷದೇ ಹಾಕ್ಕೋ ಒಂದೇ ನಿಮಿಷದಲ್ಲಿ ನಿನ್ನ ಗುರುತು ಹಚ್ಚುತ್ತೇನೆ !"

"ಎಷ್ಟೋ ಪಂದ್ಯ ?" ಅಂದೆ.

"ನೂರು ರೂಪಾಯಿ !" ಅಂದ ಮುಟ್ಠಾಳ.

"ಶೌರೀ, ಜ್ಞಾಪಕವಿಟ್ಟುಕೋ." ಅಂತ ಶೀನಿಯ ಶರತ್ತನ್ನು ಶೌರಿಗೆ ತಿಳಿಸಿ, ಕೋಣೆ ಸೇರಿ ಮಲಗಿದೆ.

ಮರುದಿನ ಬೆಳಿಗ್ಯೆ ಸ್ನಾನ, ಉಪಹಾರಗಳ ನಂತರ, ನನ್ನ ಅಲಂಕಾರದ ಬಗ್ಯೆ ವಿಪರ್ಯಾಟಿನ ಯೋಚನೆ ಮಾಡಿದೆ.

"ಕರಿಯ ವೇಷಕ್ಕೆ, ಕರಿಯ ಬೂಟ್ ಪಾಲಿಷ್ ಸಮಾನ ಬೇರೆ ಯಾವುದೂ ಇಲ್ಲ ಸರ್." ಅಂದ ಶೌರಿ.

"ಅದನ್ನ ತೆಗೆಯುವ ಬಗೆ ?" ಅಂತ ಕೇಳಿದೆ.

"ಬೆಣ್ಣೆಯಿಂದ ಸುಲಭವಾಗಿ ತೆಗೆಯಬಹುದು" ಅಂದ.

ಪೇಟೆಯಿಂದ ನಾಲ್ಕು ಟಿನ್ ಪ್ಯಾರೆಟ್ ಬ್ಲಾಕ್ ಷೂ ಪಾಲಿಷ್ ಸಂಪಾದಿಸಿಕೊಂಡು ಬಂದ ಶೌರಿ. ಎಲ್ಲಿಲೋ ಹುಡುಕಿ ಭೀಮುಮಾವನ ಒಂದು ಹಳೇ ಪಂಚೆಯನ್ನೂ ತಂದ. ವೇಷ ಬದಲಾಯಿಸಲು ಮನೆಯಲ್ಲಿ ಸರಿಹೋಗಲಾರದು ಅಂತ, ಊರಾಚೆ ಸಿಡಿ ವೀರಣ್ಣನ ತೋಪಿಗೆ ನಾನೂ ಶೌರಿ ಮತ್ಯಾರಿಗೂ ತಿಳಿಯದಂತೆ ಶೀನಿಯ ಮತ್ತು ಶಿಂಗ್ರುವಿನ ದೃಷ್ಟಿಗೆ ಬೀಳದಂತೆ. ಹೋಗಿ ಸೇರಿಕೊಂಡೆವು.

ಸಿಡಿ ವೀರಣ್ಣನ ತೋಪು ಸೇರುವ ಹೊತ್ತಿಗೆ ನನ್ನ ಮನಸ್ಸಿನಲ್ಲಿ ಏನೋ ಸಡಲಿಸಿದ ಹಾಗಾಯ್ತು. ಮರುಕ್ಷಣವೇ ಮನಸ್ಸಿನಲ್ಲಿ ಅನ್ನಿಸಿತು ಯಾರೋ ಒಬ್ಬ ಹುಚ್ಚರ ಡಾಕ್ಟರು ಬರ್ತಾರೇಂತ ನಾನು ಈ ರೀತಿ ವೇಷ ಬದಲಾಯಿಸುವ ಪ್ರಮೇಯವಾದರೂ ಏನು ಅಂತ ! ಒಂದು ವೇಳೆ ಬಣ್ಣ ಬಳಿದುಕೊಂಡು, ಆಮೇಲೆ ಆ ಬಣ್ಣ ಬೆಣ್ಣೆಯಿಂದಲೂ ಸಹ ನನ್ನ ಚರ್ಮವನ್ನು ಬಿಟ್ಟು ಹೊರಬಾರದಿದ್ದರೆ ಆಗ ? ಸಾಯುವವರೆವಿಗೂ ನಾನು ನೀಗ್ರೋ ಆಗಿಯೇ ಉಳಿಯಲಿ ? ಶೌರಿ ಬೆಣ್ಣೆಯ ಬಗ್ಯೆ ಶೋಧನೆ ನಡೆಸಿದ್ದಾನೆಯೆ ? ಅವನ ತಿಳುವಳಿಕೆಯೇ ತಪ್ಪೇಕಿರಬಾರದು ? ಹಿಂದೆ ಮೆಟ್ರಿಕ್ಕಿನಲ್ಲಿ ನಾವು ಬಳಿದುಕೊಂಡಿದ್ದು ಕೇವಲ ಇಜ್ಜಿಲುಪುಡಿ ಅಷ್ಟೆ ! ಈಗ ಈ ಶೌರಿಯ ಪ್ರಯೋಗಕ್ಕೆ ನಾನು ಯಜ್ಞಪಶು ಆಗಲೆ ?

" ಶೌರೀ." ಅಂದೆ.

" ಸರ್ ? "

" ಒಂದು ವೇಳೆ ಈ ಕರಿಯ ಬಣ್ಣ ಬೆಣ್ಣೆಯ ಸಹಾಯದಿಂದ ತೆಗೆಯುಕ್ಕೆ ಆಗದಿದ್ದರೆ ?"

" ಎಂದಿಗೂ ಸಂದೇಹ ಬೇಡ ಸರ್. ಹಿಂದೆ ಹೆಗ್ಗಡದೇವನಕೋಟೆ ಅಖಿಲಾಂಡಯ್ಯನ ಪತ್ನಿಗೆ, ಅಂದರೆ ಆಕೆ ನನ್ನ ಅತ್ತಿಗೆ ಸರ್, ಆಕೆಗೆ ದೆವ್ವ ಹಿಡಿದಿದ್ದಾಗ ಅವರ ಮನೆ ಮಿಕ್ಸೆಡ್ ಆಲ್‌ಸೇಷಿಯನ್ ಬಿಳೀನಾಯಿಗೆ ಇದೇ ರೀತಿ ಕಪ್ಪು ಬಣ್ಣ ಕರೀ ಬೂಟ್ ಪಾಲಿಷ್ ಬಳಿದು ಆಕೆಯ ಮುಂದೆ ಬೊಗಳಿಸಿದ್ದೆವು ಸರ್. ಆಮೇಲೆ ಬೆಣ್ಣೆ ಹಚ್ಚಿದ ಕೂಡಲೇ ಆ ನಾಯಿ ಮೊದಲಿದ್ದ ಹಾಗೇ ಬೆಳ್ಳಗೆ ಆಯ್ತು. ಸರ್. ಈಗಲೂ ಆ ನಾಯಿ ಬೆಳ್ಳಗೇ ಇದೆ ಸರ್."

" ನಿನ್ನ ಅತ್ತಿಗೆಗೆ ದೆವ್ವ ಬಿಡತೇನು ?"

" ಬಿಡತು ಸರ್. ಆದರೆ ಆಕೆಯ ಅತ್ತೇನ ಅಂದರೆ ನನ್ನ ದೊಡ್ಡಮ್ಮನ್ನ ಹಿಡುಕೊಂಡಿತು."

"ಆದರೂ ಶೌರಿ ಹೆಗ್ಗಡದೇವನಕೋಟೆಯ ಕಂತ್ರಿ ನಾಯಿಗೆ..."

"ಮಿಕ್ಸೆಡ್ ಆಲ್‌ಸೇಷಿಯನ್ ಸರ್. "

" ಸರಿ ನಿನ್ನ ಮಿಕ್ಸೆಡ್ ಆಲ್‌ಸೇಷಿಯನ್ ಬಿಳಿ ನಾಯಿಗೆ ಸರಿಹೋಗುವ ಚಿಕಿತ್ಸೆ ನನಗೆ ಸರಿಹೋಗುತ್ತೋ ಇಲ್ಲವೋ ಹೇಳಲಾರೆ ಶೌರಿ. ಹಾಗೂ ಒಂದು ಸಣ್ಣ ಮಗುವಿನ ಹುಟ್ಟಿದ ಹಬ್ಬ ಕಟ್ಟಿಕೊಂಡು ನಮಗೇನಾಗಬೇಕು ? ರಾಜಾರೋಷವಾಗಿ ಯುದ್ಧದಲ್ಲಿ ಮುಂಚಿನ ಏರ್ಪಾಟಿನಂತೆ ಹಿಂದೆ ಸರಿಯುವ ಹಾಗೆ ನಾವೇಕೆ ಹಿಂದೆ ಸರಿಯಬಾರದು ? ಈ ಅಂಜುಬುರುಕುತನವೇಕೆ ಶೌರಿ ? "

" ಆದರೆ ಸರ್ ಶ್ರೀನಿವಾಸರಾಯರು ನೂರುರೂಪಾಯಿ ಪಂದ್ಯ ಕಟ್ಟಿದ್ದಾರಲ್ಲಾ ಸರ್ !"

ಕಾಯಿಸಿದ ಪಾದರಸಕ್ಕೆ ಎಲ್ಲಿ ಹೊಡಿಯಬೇಕು ಅಂತ ಶೌರಿಗೆ ಚೆನ್ನಾಗಿ ಗೊತ್ತು! ನನಗೆ ಈ ಶೀನಿಯ ಬಾಜಿ ವಿಷಯ ಮರತೇ ಹೋಗಿತ್ತು. ಬಹಳ ದಿನಗಳಿಂದಲೂ ಶೀನಿಯಮೇಲೆ ನನ್ನ ಸೇಡೊಂದಿತ್ತು. ಪ್ರಾಯಶಃ ನಿಮಗೆ ಹಿಂದೆ ತಿಳಿಸಿದ್ದೆನೋ ಇಲ್ಲವೋ, ಇದೇ ಶೀನಿ ನಮ್ಮ ಮೈಗಳ್ಳರ ಸಂಘದ ನೀರಿನ ತೊಟ್ಟಿಯಲ್ಲಿ ನನ್ನನ್ನು ನನ್ನ ಹೊಸಾ ಸೂಟಿನ ಸಮೇತ ಬೀಳಿಸಿದ್ದ. ನೀರು ಭರ್ತಿ ಇತ್ತು. ಬೀಳಿಸಿ ಚಪ್ಪಾಳೆ ತಟ್ಟಿ ನಕ್ಕಿದ್ದ. ಸದಸ್ಯರೆಲ್ಲರಿಂದಲೂ ಚಪ್ಪಾಳೆತಟ್ಟಿಸಿ ನಗಿಸಿದ್ದ. ಅದನ್ನು ನಾನು ಮರೆತಿಲ್ಲ. ಈಗ ಅದೇ ಶೀನಿಯಿಂದ ನೂರು ರೂಪಾಯಿ ಕಸಿದುಕೊಂಡರೆ ನನ್ನ ಮನಸ್ಸಿಗೆ ತುಸವಾದರೂ ಶಾಂತಿ ಸಿಗಬಹುದು ಅಂತ ನೆನೆಸಿದೆ.

" ಶೌರೀ ಒಳ್ಳೆಯ ಸಮಯಕ್ಕೆ ಜ್ಞಾಪಕಕ್ಕೆ ತಂದೆ. ಈ ಶೀನಿ ಹಿಂದೆ ಪ್ಯೆಗಳ್ಳರ ಸಂಘದಲ್ಲಿ ನನಗೆ ಕೊಟ್ಟ ಉಪದ್ರವ ನಿನಗೆ ಗೊತ್ತೆ ? "

" ಗೊತ್ತು ಸರ್ ಅದೇ ನಿಮ್ಮ ಹೊಸಾ ಸೂಟ್ ಸಮೇತ..."

" ಸರಿ ಶೌರಿ. ನನಗೆ ಆ ಪ್ರಸಂಗವನ್ನು ನೆನಪಿಗೆ ತರಬೇಡ. ಈಗ ಅವನಿಂದ ನೂರು ರೂಪಾಯಿ ಹೊಡೆಯಲೇಬೇಕು, ಹಚ್ಚು ಕರೀಪಾಲೀಷ್‌ನ ! "

ನನ್ನ ವೇಷ ತಯಾರಾಗುವ ಹೊತ್ತಿಗೆ, ನಾವಿದ್ದ ತೋಪಿನ ಅಂಚಿನಲ್ಲಿ ಡಾಕ್ಟರ್ ಭುಜಂಗರಾಯರ ಪಾಂಟಿಯಾಕ್ ಕಾರು ಹಾಯ್ದು ಊರಿನ ಕಡೆ ಧಾವಿಸಿತು. ನಾನು ಅದೇ ತಾನೇ ಭೀಮಮಾವನ ಪಂಚೆ ಕಚ್ಚೆ ಹಾಕಿ ಸುತ್ತಿಕೊಂಡಿದ್ದೆ.

" ಕಚ್ಚೆಗೆ ಬೆಲ್ಟ್ ಹಾಕಿಕೊಳ್ಳಿ ಸರ್. ಇಲ್ಲದಿದ್ದರೆ ಪುನಃ ಇದೇ ರೀತಿ ಬಿದ್ದು ಹೋಗುತ್ತೆ ! " ಅಂದ ಶೌರಿ.

ಅದೇಕೋ ಏನೋ ಮೊದಲಿನ ಹಾಗೆ ನನ್ನ ಮನಸ್ಸಿನಲ್ಲಿ ಏನೋ ಸಡಿಲವಾದ ಹಾಗಾಯ್ತು.

" ಶೌರಿ, ಈಗಲೂ ಯೋಚನೆ ಮಾಡು. ಈ ತಾಪತ್ರಯವೆಲ್ಲಾ ಏಕೆ ?" ಅಂದೆ.

" ಸರ್ ಇದರ ಬೆಲೆ ನೂರು ರೂಪಾಯಿ ಸರ್ " ಅಂದ. ವೇಷವೆಲ್ಲವನ್ನೂ ಧರಿಸಿದ ಮೇಲೆ ರಾಮಪುರವನ್ನು ಪ್ರವೇಶಿಸುವುದಕ್ಕೆ ಧೈರ್ಯ ಬರಲಿಲ್ಲ. ಒಂದು ವೇಳೆ ಪ್ರವೇಶ ಮಾಡಿದರೂ ಮುಂದೇನು ಮಾಡಬೇಕೆಂದು ತೋಚಲಿಲ್ಲ. ಶೌರಿಯ ಸಲಹೆ ಕೇಳಿದೆ.

" ಈಗ ನೇರವಾಗಿ ಮನೆಗೆ ಹೋಗಿ ಸಮಯ ನೋಡಿ ನಿಮ್ಮ ಕೋಣೆ ಸೇರಿ ಕೊಳ್ಳಿ ಸರ್. ಅಲ್ಲಿಗೆ ಊಟ ನಾನೇ ತರ್ತೇನೆ ಸರ್ ಮ್ಯಾಟಿನೀ ಸಿನಿಮಾ ಶುರುವಾ ಗುವ ಸಮಯಕ್ಕೆಲ್ಲಾ ಇಲ್ಲಿಯ ವೇಷಗಳು ಬರುತ್ತವೆ ಸರ್. ತಮಟೆಯ ಗುಂಪಿನಲ್ಲಿ ನೀವು ಸೇರಿಕೊಳ್ಳುವ ಹಾಗೆ ನಾನು ಏರ್ಪಾಟು ಮಾಡ್ತೇನೆ. ಸರ್; ಶ್ರೀನಿವಾಸರಾಯರನ್ನು ನಾನು ಭೇಟಿ ಮಾಡಿ ಅವರು ನಿಮ್ಮ ವಿಷಯ ಕೇಳಿದಾಗ ಪ್ರಾಯಶಃ ಪಟ್ಟಣಕ್ಕೆ ಹೋಗಿರಬಹುದು ಅಂತ ಹೇಳಿ ಹಾಗೇ ಆ ತಮಟೆಯ ಗುಂಪಿನ ಹತ್ತಿರಕ್ಕೆ ಕರ್ಕೊಂಡು ಬರ್ತೇನೆ ಸರ್. ಸ್ವಲ್ಪ ಹೊತ್ತು ನೀವು ಅವರೆದುರಿಗೆ ಕುಣಿದು ಆಮೇಲೆ ವೇಷ ಅಳಿಸಿಕೊಂಡು ಅವರ ಹತ್ತಿರ ನೂರು ರೂಪಾಯಿ ವಸೂಲು ಮಾಡಿ ಮೈಸೂರಿಗೆ ಹೊರಟೇಬಿಡೋಣ ಸರ್. ಡಾಕ್ಟರ್ ಭುಜಂಗರಾಯರನ್ನು ಭೇಟಿ ಮಾಡುವ ಪ್ರಮೇಯವೇ ಬರುವುದಿಲ್ಲ ಸರ್." ಅಂದ.

ಶೌರಿ ಹೇಳಿದ ರೀತಿ ನೋಡಿದರೆ, ಶೀನಿಯ ಹತ್ತಿರ ನೂರು ರೂಪಾಯಿ ವಸೂಲು ಮಾಡುವುದು ಸ್ಟೇಟ್ ಬ್ಯಾಂಕಿನಲ್ಲಿ ಚೆಕ್ ಕ್ಯಾಷ್ ಮಾಡುವಷ್ಟು ಸುಲಭ

ಅಂತ ತಿಳಿದುಕೊಂಡಹಾಗಿತ್ತು. ಆದರೆ ನನ್ನ ಧೈರ್ಯ ಆ ನೂರು ರೂಪಾಯಿಗೂ ಹೊರಬರಲಿಲ್ಲ.

"ಇಲ್ಲ ಶೌರಿ, ನಾನಿಲ್ಲೇ ಇರ್ತೀನೆ. ಇಲ್ಲಿಗೆ ಹೇಗಾದರೂ ಮಾಡಿ ನನ್ನ ಊಟ ತಂದುಬಿಡು. ಮಧ್ಯಾಹ್ನ ತಮಟೆಯು ಗ್ಯಾಂಗ್ ಊರಿಗೆ ಬರುವ ಹೊತ್ತಿಗೆ ಹೊರಟು ಅದಕ್ಕೇ ನೇರವಾಗಿ ಸೇರಿಕೊಳ್ಳುವ ಏರ್ಪಾಟು ಮಾಡು" ಅಂದೆ.

"ಸರಿ ಸರ್" ಅಂದ.

ಊಟ ಮುಗಿಸಿ ಸ್ವಲ್ಪ ಹಾಗೇ ತೂಕಡಿಸುವ ಹೊತ್ತಿಗೆ ನಾಲ್ಕು ದಿಕ್ಕುಗಳಿಂದಲೂ ಭಯಂಕರ ತಮಟೆಗಳ ಶಬ್ದ ಕೇಳಿಬಂತು. ನಮ್ಮ ಮನಸ್ಸಿನಲ್ಲಿ ಕಳವಳ ತುಂಬಿರುವಾಗ ಹೊತ್ತು ಎಷ್ಟು ಜಾಗ್ರತೆ ಹೋಗುತ್ತೋ!

"ಸರ್" ಅಂತ ಎಚ್ಚರಿಸಿದ ಶೌರಿ.

"ಏನು ಶೌರಿ?"

"ಹೊರಡೋಣ ಸರ್ ಮಧ್ಯಾಹ್ನ ಊಟ ತರಲು ಹೋಗಿದ್ದಾಗ ಶ್ರೀನಿವಾಸ ರಾಯರು ನಿಮ್ಮನ್ನು ವಿಚಾರಿಸಿದರು ಸರ್. ಸಂಘದಲ್ಲಿ ಡ್ರಾಮಾ ಕಮ್ಮಿಟಿ ಮೀಟಿಂಗ್ ಇರುವುದರಿಂದ ಪಟ್ಟಣಕ್ಕೆ ಹೋಗಿದ್ದಾರೆ ಅಂತ ತಿಳಿಸಿದೆ ಸರ್. ಸಧ್ಯ ನಮ್ಮ ಓಪೆಲ್ ಇಲ್ಲೇ ಇದ್ದದ್ದು ಶ್ರೀನಿವಾಸರಾಯರು ಗಮನಿಸಲಿಲ್ಲ ಸರ್."

"ಮುಟ್ಠಾಳ"

"ಡಾಕ್ಟರ್ ಭುಜಂಗರಾಯರು ವಿಚಾರಿಸಿದರು ಸರ್. ನಾನು ಏನಾದರೂ ಹೇಳುವ ಮೊದಲೇ ಬಾಳಾಜೀರಾಯರು ನೀವೆಲ್ಲೋ ಪ್ರಾಯಶಃ ಅಲ್ಲೇ ಇರಬೇಕು ಅಂತ ಹೇಳಿದರು ಸರ್. ಅವರು ನಿಮ್ಮ ಕಾರನ್ನು ಗಮನಿಸಿದ್ದರು ಸರ್."

"ಶುದ್ಧ ತಲೆಹೋಕ! ಅವನಿಗೆ ನಾನೆಲ್ಲಿದ್ದರೆ ಏನಂತೆ?"

"ಹೊರಡೋಣ ಸರ್" ಅಂದ.

"ಸ್ವಲ್ಪ ತಾಳು ಶೌರಿ. ಸಿನಿಮಾ ಮೊದಲನೇ ಷೋ ಶುರುವಾಗುವ ಸಮಯಕ್ಕೆ ಹೊರಡೋಣ" ಅಂದೆ.

"ಆದರೆ ಸರ್..."

"ಶೀನಿಯ ಹತ್ತಿರ ನೂರು ರೂಪಾಯಿ ವಸೂಲು ಮಾಡೋಕೆ ಸ್ವಲ್ಪ ಕತ್ತಲಾದರೆ ವಾಸಿ ಶೌರಿ" ಅಂದೆ.

ಮರುಕ್ಷಣವೇ ಕತ್ತಲಾಯ್ತು.

ನಾನೂ ಶೌರಿ ಸಿಡಿವೀರಣ್ಣನ ತೋಪನ್ನು ಬಿಟ್ಟು ಊರಿನ ಮುಖ್ಯ ರಸ್ತೆ ಸೇರಿದೆವು. ನನಗಂತೂ ನಾನೂ ಬರೀ ಬೆತ್ತಲೆಯಲ್ಲಿ ನಡೆಯುತ್ತಿದ್ದೇನೆಯೋ

ಅನ್ನಿಸಿತು. ಆದರೆ ಶೌರಿಯು ಹತ್ತಿರ ನನ್ನ ಬಟ್ಟೆಗಳನ್ನು ಕೊಟ್ಟಿದ್ದೆನಾದ್ದರಿಂದ ಅದನ್ನು ಕೇಳಲು ಧೈರ್ಯ ಬರಲಿಲ್ಲ. ಆದಷ್ಟೂ ಶೌರಿಯು ಮರೆಯಲ್ಲೇ ನಡೆದೆ. ಭೀಮುಮಾವನ ಮನೆಯ ಗೋಡೆ ಸುಮಾರು ಬೌಂಡರೀ ಲೈನಿನಷ್ಟು ದೂರದಲ್ಲಿ ಕಾಣುತ್ತಾ ಇದ್ದಾಗ ಯಾರೋ ನನ್ನ ಹೆಸರನ್ನು ಹಿಡಿದು ಅರಚಿದರು.

" ಹರ್ರೀ !!! "

ಸಾವಿರ ಇಲಿಗಳು ಸಾವಿರ ಪ್ರಸವ ವೇದನೆಗಳಲ್ಲಿ ಕಿರುಲುವ ಕಿರುಲು !

ಶೀನಿ !

ಓಡಲು ಶುರುಮಾಡಿದೆ. ಶೌರಿಯೂ ಓಡಿದ.

" ನೇರವಾಗಿ ಮನೆಯ ಹಿಂದುಗಡೆ ಇರೋ ಕೊಟ್ಟಿಗೆಗೆ ಹೋಗೋಣ ಸರ್. ಅದು ಖಾಲಿ ಇದೆ ಸರ್. ಅಲ್ಲಿಗೆ ಬೆಣ್ಣೆ ತರ್ತೇನೆ ಸರ್. ಹತ್ತಿರದಲ್ಲಿ ರಾಮನವಮಿ ಕೊಳವಿದೆ ಸರ್." ಅಂತ ಶೌರಿ ಮಿಲಿಟರಿ ಕಮ್ಯಾಂಡ್ ಕೊಟ್ಟ.

ಕೊಟ್ಟಿಗೆ ಸೇರಿದೆವು. ನನ್ನನ್ನು ಒಳಗೆ ತಳ್ಳಿ, ಅದರ ಒಂಟಿ ಬಾಗಿಲನ್ನು ಮುಚ್ಚಿಕೊಂಡು ಶೌರಿ ಬೆಣ್ಣೆ ತರಲು ಮನೆಗೆ ಓಡಿದ. ಕೊಟ್ಟಿಗೆ ಅಂದರೆ ಸಧ್ಯ ದನದ ಕೊಟ್ಟಿಗೆ ಆಗಿರಲಿಲ್ಲ. ಅಲ್ಲಿ ಮನೆ ಎತ್ತರ ಸೌದೆ ಪೇರಿಸಿದ್ದರು. ಆದರೂ ನನಗೆ ಓಡಾಡಲು ಸ್ವಲ್ಪ ಜಾಗವಿತ್ತು. ಕಗ್ಗತ್ತಲಾದರೂ ಮನೆಯ ಬೆಳಕಿನಿಂದ ಸ್ವಲ್ಪ ಕಾಣುತ್ತಿತ್ತು.

ಶೌರಿ ಎಷ್ಟು ಹೊತ್ತಾದರೂ ಬರಲೇ ಇಲ್ಲ. ನನ್ನ ಮನಸ್ಸಿನಲ್ಲಿ ಆಗಲೇ ಸಿನಿಮಾ ಎರಡನೇ ಷೋ ಮುಗಿಯುವ ಹೊತ್ತಾಯ್ತು ಅಂದುಕೊಂಡಿದ್ದೆ. ಆದರೆ ಮನೆಯ ಕಡೆಯಿಂದ ಮಾತು ಕೇಳಿ ಬರುತ್ತಲೇ ಇತ್ತು. ಇದ್ದಕ್ಕಿದ್ದಹಾಗೆ ಟೈಗರ್ ಅಂದರೆ ರಾಮಪುರದ ಮನೆಯ ನಾಯಿ ಬೊಬ್ಬೆ ಇಡೋಕೆ ಶುರುಮಾಡಿತು. ಮರುಕ್ಷಣವೇ ಕೊಟ್ಟಿಗೆಯ ಬಾಗಿಲನ್ನು ಯಾರೋ ದಿಢೀರ್ ಅಂತ ಒಳಕ್ಕೆ ತಳ್ಳಿ, ನುಗ್ಗಿ ಪುನಃ ಬಾಗಿಲನ್ನು ದಿಢೀರ್ ಅಂತ ಮುಚ್ಚಿದರು.

" ಶೌರೀ !" ಅಂತ ಕೂಗಿದೆ,

" ಶೌರಿ ಅಲ್ಲ ನಾನು ! ನೀವ್ಯಾರು? " ಅಂದಿತು ಆ ಆಸಾಮಿಯು ಗಂಟಲು

ಏಕೋ ಏನೋ ನನಗೆ ವಿಪರೀತ ಹೆದರಿಕೆಯಾಯ್ತು.

" ಶೌರಿ ಎಲ್ಲಿ ?" ಅಂದೆ ಹಲ್ಲುಗಳ ಮಧ್ಯದಿಂದ.

" ಯಾರದು ? ಹರಿ ಮಾಧವರಾವ್ ? ನಾನು ಹರೀ ಭುಜಂಗರಾವ್ ! ಬಹಳ ದಿನವಾಯ್ತು ಭೇಟಿ ಮಾಡಿ. ನೀವೇನು ಮಾಡ್ತಿದ್ದೀರಿ ಇಲ್ಲಿ ?"

" ನಾನು ಶೌರಿಗಾಗಿ ಕಾದಿದ್ದೇನೆ." ಅಂತ ತೊದಲಿದೆ.

" ಸರಿ ಬಿಡಿ ಹರಿಮಾಧವರಾವ್ ಶೌರಿ ಈಗಲೇ ಇಲ್ಲಿಗೆ ಬರ್ತಾನೆ. ಬೆಣ್ಣೆ ತರೋಕೆ ಹೋಗಿದ್ದಾನೆ " ಅಂದರು.

ನಾನು ನಿಜವಾಗಿ ಎಚ್ಚರವಾಗಿದ್ದೇನೋ ಅಥವಾ ನಿದ್ರಾವಸ್ಥೆಯಲ್ಲಿ ಇಷ್ಟೆಲ್ಲಾ ವಿಚಿತ್ರ ಅನುಭವ ಪಡೀತಿದ್ದೇನೋ—ತಿಳಿಯಲಿಲ್ಲ. ಆದರೆ ನನ್ನೆದುರಿಗೆ ನಿಂತಿದ್ದ ಭುಜಂಗರಾಯರ ಶ್ವಾಸ ನನ್ನ ಮುಖಕ್ಕೆ ಬಡಿಯುತ್ತಿತ್ತು.

" ಬೆಣ್ಣೆ ಏಕೆ ಸರ್ ?" ಅಂದೆ.

ನನ್ನ ಮನಸ್ಸಿನಲ್ಲಿ ಒಂದು ವಿಧವಾದ ಧೈರ್ಯ ಉಕ್ಕಿ ಬರುತ್ತಿತ್ತು.

" ಅದೊಂದು ದೊಡ್ಡ ಕಥೆ ಹರಿ ಮಾಧವರಾವ್ ! ಇವತ್ತು ಮಧ್ಯಾಹ್ನ ಈ ಊರಿನ ಝಾಡಮಾಲಿಗಳು ವೇಷ ಹಾಕ್ಕೊಂಡು ತಮಟೆ ಹೊಡದುಕೊಂಡು ಮನೆ ಮುಂದೆ ಕುಣಿದರು. ಇದನ್ನು ನೋಡಿ ನಮ್ಮ ವಿಮಲಮ್ಮನ ಮಗು ಕೇಕೆ ಹಾಕಿದ್ದೂ ಹಾಕಿದ್ದೆ ! ಆದರೆ ಆ ಗುಂಪು ತಮ್ಮ ಮಾಮೂಲು ವಸೂಲಿಮಾಡಿಕೊಂಡು ಹೊರಟು ಹೋಗಿದ್ದೇ ತಡ ಮಗು ರಣರಂಪು ಮಾಡೋಕೆ ಶುರು ಹಚ್ಚಿಬಿಡ್ತು. ಏನೇನು ಮಾಡಿದರೂ ಸುಮ್ಮನಾಗಲಿಲ್ಲ. ಪುನಃ ಆ ಗುಂಪನ್ನು ಕರೆಸೋಣ ಅಂತ ನಾನು ಹೇಳಿದೆ. ನಾಗಮ್ಮ ಒಪ್ಪಲಿಲ್ಲ. ಆ ಗುಂಪಿನಿಂದಲೇ ಮಗೂಗೆ ದೃಷ್ಟಿ ಆಗಿದೆ ಅಂದರು. ಆದ್ದರಿಂದ ನಾನು ಆ ಝಾಡಮಾಲಿಗಳ ವೇಷ ಧರಿಸಿ ಆ ಮಗುವಿನ ಎದುರಿಗೆ ಕಾಣಿಸಿಕೊಂಡರೆ ಮಗು ಸಮಾಧಾನವಾಗಬಹುದು ಅಂತ ಅಂದುಕೊಂಡು .. ಛೆ ! ನಗ್ತೀರೇನು ?"

" ಛೆ ! ಇಲ್ಲಾ ಸರ್. ಏನೋ ನುಸಿ ಮೂಗಿನೊಳಗೆ ಹೋಯ್ತು ಅಷ್ಟೆ. ವೇಷ ಎಲ್ಲಿ ಬದಲಾಯಿಸಿದಿರಿ ?"

" ನಿಮ್ಮ ಕೋಣೆಯಲ್ಲೇ ಬದಲಾಯಿಸಿದೆ. ಮಧ್ಯಾಹ್ನ ಶೌರಿ ಬಂದಿದ್ದ ನೀವು ನಿದ್ರೆ ಮಾಡಿದ್ದಿರಂತೆ ಎಲ್ಲೋ ತೋಪಿನಲ್ಲಿ. ಆಗ ಈ ಕರೀ ಬಣ್ಣ ಹೇಗೆ ಹಚ್ಚಿಕೊಳ್ತಾರೆ ಅಂತ ಕೇಳಿದ್ದೆ ಸುಮ್ಮನೆ. ಕರೀ ಬೂಟ್ ಪಾಲಿಷ್ ಅಂತ ಶೌರಿ ಹೇಳಿದ್ದ. ಸಂಜೆ ವಿಮಲಾ ಮಗು ಅಳುಕ್ಕೆ ಶುರುಮಾಡಿದ ತಕ್ಷಣ ನನಗೆ ಶೌರಿಯ ಮಾತು ಜ್ಞಾಪಕ ಬಂತು, ನನ್ನ ಹತ್ತಿರ ಚೆರ್ರೀ ಬ್ಲಾಸಮ್ಸ್ ಬ್ಲಾಕ್ ಷೂ ಪಾಲಿಷ್ ಇತ್ತು. ನಿಮ್ಮ ಕೋಣೆಯಲ್ಲಿ ಯಾರಿಗೂ ತಿಳಿಯದ ಹಾಗೆ ಹಚ್ಚಿಕೊಂಡೆ. ಆದರೆ ಅಷ್ಟರಲ್ಲಿ ವಿಮಲಾ ಮಗು ನಿದ್ರೆ ಮಾಡಿಬಿಟ್ಟಿದೆ. ಅದು ಎದ್ದ ತಕ್ಷಣ ಅದಕೇನಂತೆ. ಸಧ್ಯ ದೇವರು ಬಂದ ಹಾಗೆ ಶೌರಿ ಕಾಣಿಸಿಕೊಂಡು ನನ್ನನ್ನು ಇಲ್ಲಿಗೆ ಕಳುಹಿಸಿದ ಬೆಣ್ಣೆ ತರ್ತಾನೆ ಈ ಬಣ್ಣ ತೆಗೆಯೋಕೆ. ಅದಿರಲಿ. ಹರಿಮಾಧವರಾವ್ ನೀವೇಕೆ ಇಲ್ಲಿದ್ದೀರಿ?.

ನನ್ನ ಕಥೆಯನ್ನೂ ಹೇಳಿದೆ. ಕಥೆ ಮುಗಿಯುವ ಹೊತ್ತಿಗೆ ಶೌರಿ ಬಂದ" ಒಂದು ಕೈಲಿ ಹಚ್ಚಿದ ಲಾಂದ್ರ, ಮತ್ತೊಂದು ಕೈಲಿ ಒಂದು ಸಣ್ಣ ಪಟ್ಟಣ. ಲಾಂದ್ರದ

ಬೆಳಕಿನಲ್ಲಿ ನಾನೂ ಮತ್ತು ಡಾಕ್ಟರ್ ಭುಜಂಗರಾಯರು ಪರಸ್ಪರ ಗುರುತು ಮಾಡಿಕೊಂಡೆವು. ನನಗೆ ನಗು ಚಿಮ್ಮಿ ಬಂತು. ಡಾಕ್ಟರ್ ಭುಜಂಗರಾಯರಿಗೂ ನಗು ಚಿಮ್ಮಿ ಬಂತು. ಇಬ್ಬರೂ ನಕ್ಕೆವು.

ಶೌರಿ ಕೆಮ್ಮಿದ.

" ಸರ್ ಬೆಣ್ಣೆ ಸಿಗಲಿಲ್ಲ ಸರ್. ಸೋಪು ಮಾತ್ರ ತಂದೆ ಸರ್. ಸದ್ಯಕ್ಕೆ ಈ ಲಾಂದ್ರದಿಂದ ಸ್ವಲ್ಪ ಸೀಮೆ ಎಣ್ಣೆ ತೆಗೆದು ಮುಖ ಮಾತ್ರ ವರಸಿಕೊಂಡು ಇಲ್ಲಿಂದ ಫಲಾಯನ ಮಾಡಬೇಕು ಸರ್ !" ಅಂದ.

" ನಮ್ಮ ಗತಿ !" ನಾನೂ ಭುಜಂಗರಾಯರು ಇಬ್ಬರೂ ಒಟ್ಟಿಗೆ ಅರಚಿದೆವು.

" ಒಂದೇ ಉಪಾಯ ಸರ್. ಮುಖ ಸರಿಮಾಡಿಕೊಂಡು ಬಟ್ಟೆ ಧರಿಸಿ ನೇರವಾಗಿ ಮೈಸೂರಿಗೆ ಹೋಗಿ ಮನೆಯಲ್ಲಿ ಸ್ನಾನ ಮುಗಿಸಿ..."

" ಬೆಣ್ಣೆ ?

" ನಮ್ಮ ಮನೆಯಲ್ಲಿದೆ ಸರ್. ನಿನ್ನೆ ಬೆಳಿಗ್ಗೆ ಮನೆಗೆ ತಂದಿದ್ದ ಬೆಣ್ಣೆ ಹಾಗೇ ಇದೆ ಸರ್ "

" ಈಗ ಹೊರಡೋದಾದರೂ ಹೇಗೆ ಶೌರಿ ? "

" ನಾನೆಲ್ಲಾ ಏರ್ಪಾಟು ಮಾಡಿದ್ದೇನೆ ಸರ್. ಇಬ್ಬರಿಗೂ ಬೇಕಾಗುವಷ್ಟು ಬಟ್ಟೆ ಬರೆ ಓಪೆಲ್‌ನಲ್ಲಿಟ್ಟು ಓಪೆಲ್‌ನ ಗೇಟಿನಾಚೆ ನಿಲ್ಲಿಸಿದ್ದೇನೆ ಸರ್. ಈಗಲೇ ನೀವಿಬ್ಬರೂ ಹೊರಟರೆ ಸಿನಿಮಾ ಎರಡನೇ ಷೋ ವಿರಾಮದ ಹೊತ್ತಿಗೆ ಮೈಸೂರಿಂದ ಇಲ್ಲಿಗೆ ವಾಪಸಾಗಬಹುದು.

" ಹರಿ ಶೌರಿ ಹೇಳೋದು ಸರಿ. ಆದರೆ ನಾವಿಲ್ಲಿಂದ ಮಾಯವಾಗಲು ಕಾರಣ!"

ಅದು ಯೋಚನೆ ಮಾಡಿದ್ದೇನೆ ಸರ್, ವಿಮಲಮ್ಮನ ಮಗುವಿಗೆ ಮೈಸೂರಿಂದ ಉಡುಗೊರೆ ತನ್ನಿ ಸರ್. ಆದಕ್ಕಾಗಿ ಇಬ್ಬರೂ ಮೈಸೂರಿಗೆ ಹೋಗಿದ್ದಿರಿ ಅಂತ ಇಲ್ಲಿ ತಿಳಿದು ಹೇಳ್ತಾರೆ. ನಾನಿಲ್ಲೇ ಇದ್ದು ಇಲ್ಲಿಯ ಪರಿಸ್ಥಿತಿ ಸುಧಾರಿಸುತ್ತೇನೆ."

" ಬೇಡ ಶೌರಿ ಇಲ್ಲಿಯ ಪರಿಸ್ಥಿತಿ ಮುಂದಾಮೋಚಿತು. ನೀನೂ ಬಾ ಶೌರಿ ಹೊರಡಿ ಹರಿ ಮಾಧವರಾವ್ ನಾನು ಮಗುವಿಗೆ ಪ್ರಸೆಂಟ್ ಏನೂ ತಂದೇ ಇಲ್ಲ Damn it ! "ಅಂದರು ಡಾಕ್ಟರ್ ಭುಜಂಗರಾಯರು.

ಡಾಕ್ಟರ್ ಭುಜಂಗರಾಯರು, ಶೌರಿ, ನಾನು ಓಪೆಲ್ ಹತ್ತಿದೆವು.

—ಕೇಫ

ವೆಂಕಟರಮಣಾ

ಬರೆದವರು :
ಶ್ರೀಮತಿ ಮಂದಾಕಿನಿ

★

ಕಾರಖಾನೆಯಲ್ಲಿ ಕೆಲಸ ಮಾಡುವ ನಮ್ಮ ರಾಯರು ಇಂಗ್ಲೀಷಿನಲ್ಲಿ Scholar. ತಮ್ಮ ದೊಡ್ಡ ಮನಸ್ಸಿನಿಂದಲೂ ಉದಾರತೆಯಿಂದಲೂ ಜನರನ್ನೂ ಗಳಿಸಿದ್ದಾರೆ. ಯಾರೇ ಬಂದು ಏನೇ ಕೇಳಿದರೂ, ಯಾರಿಗೂ, ಇಲ್ಲ ಎಂದೇ ಇಲ್ಲ. ಅವರ ಮನೆ ಹಾಲಿನಾಕೆ, " ರಾಯ್ರು, ಇವತ್ತ ಹಾಲು ಉಳದಾವ್ರಿ, ಹುಡುಗ್ರು ಹುಪ್ಪಡಿ ಕುಡಿತಾವ ಇದೊಂದು ಸೇರು ನಿಮಗs ಹಾಕಿ ಬಿಡಲೇನ್ರಿ, " ಎಂದಾಗ ಹುಡುಗರು ಊರಲ್ಲಿ ಲ್ಲದಿದ್ದರೂ, ರಾಯರು, " ಏನಾರ ಮಾಡತೇನಿ, ನೀ ಹಾಕಿ ಹೋಗವ್ವಾ, ಮನಿ ಮನಿ ಕೇಳಿಕೋತ ಎಲ್ಲೆ ತಿರಗತಿ ಮುದಕಿ ," ಅನ್ನುವವರು. ಅದಕ್ಕೆಂದೇ ರಾಯರು ಎಲ್ಲರಿಗೂ 'ನಮ್ಮ ರಾಯರು ' ಆಗಿದ್ದರು.

ಒಂದು ದಿನ ಮುದುಕಿ ಹಾಲಿನ ಭಾಂಡಿಗೆ ಹಾಲು ಸುರುವಿ, " ರಾಯ್ರು s, ಅದೇsನೋs ಎಂಕಟರಮಣಾ ಕೊಡತಾರಂತಲ್ರೀ. ನಿಮಗೂ ಕೊಡತಾರೇನ್ರೀ ?" ಎಂದು ಕೇಳಿದಳು ಆತ್ಮೀಯತೆಯಿಂದ.

ಎಂಕಟರಮಣಾ ! ಲಂಚಕ್ಕೇ ಇವಳು ಇಟ್ಟಿರುವ ಇನ್ನೊಂದು ಹೆಸರಿರಬೇಕೆಂದು ಊಹಿಸಿದರು ರಾಯರು.

" ಅಂಥಾದ್ದೆಲ್ಲಾ ನಾ ತೊಗೊಂಬುದಿಲ್ಲಾ ಕಣ್ಣೆತ್ತಿ ನೋಡೂದುಲ್ಲಾ ಸುದ್ಧಾ ನಮ್ಮ ಗೃಹಮಂತ್ರಿ ಯಾತಕ್ಕ ಟೊಂಕಾ ಕಟ್ಯಾರ ಗೊತ್ತದ ? ಏನಬೇ ಮುದಕೀ ?" ಎಂದರು.

" ನನಗ್ಯಾನ ಗೊತ್ರೀ ರಾಯ್ರು s ಅದೆಲ್ಲಾ ನಿಮ್ಮಂಥೋರ್ಗೆ ಗೊತ್ತು. ಎಂಕಟ ರಮಣಾ ಎಲ್ಲಾರ್ಗೂ ಕೊಡತಾರಂತ್ರೀ " ಮುದುಕಿ ತಿಳಿಸಿ ಹೇಳಲು ಪ್ರಯತ್ನಿಸಿದಳು.

" ಎಲ್ಲಾರ್ಗೂ ಕೊಡತಾರ್ರು ! ಕಾರಖಾನ್ಯಾಗ ಎಂಕಪ್ಪನ ಪ್ರಸಾದಾನೂ ಕೊಡ್ಲಿಕ್ಕೆ ಸುರುಮಾಡಿದರೋ ಏನು ಮತ್ತ ! ನನಗ ಕೊಟ್ಟರಂದರ, ಅದರಾಗಿಂದು ನಿನಗೂ ಅಷ್ಟು ಕೊಡತೇನಿ ಮುದಿಕಿ. ಹಾಂಗಾದರ ನಿನ್ನ ಕುಲದೇವರು ಎಂಕಪ್ಪನ್ಯs." ಮುದಿಕಿಗೇನು ಇದರಿಂದ ಸಮಾಧಾನವಾಗಲಿಲ್ಲ.

"ನಿಮ್ಮದ್ರಾಗಿಂದು ನನಗ್ಯಾಕ ಬೇಕ್ರೀ. ನನ್ನ ಹಾಲಿನ ಬಾಕಿ ಎಷ್ಟೋ ಅಷ್ಟು ನನಗ ಸಿಕ್ಕ್ಯತೀ, ಸಾಕ್ರಿ. ಏನೋ ಸುಮಾಗ ಕೇಳ್ದಿ, ನಮ್ಮ್ ರಾಯ್ರಿಗೆ ಎಷ್ಟ ಸಿಕ್ಕ್ಯತೋ ಅಂತ. ಕುಲಕರಣಿ ಕಾರಕೂನ್ರ ಮುದಿಕಿ ಇಲ್ರಿ, ಅದು ಹೇಳತಿತ್ತು. ನನ್ನ ಮಗ್ಗ ಇಷ್ಟ ಸಿಕ್ಕಲೇ, ಇನ್ನs ವರ್ಸಾ ವರ್ಸಾನೂ ಅsಟsಟೂs ಹೆಚ್ಚೆಚ್ಗಿ ಕೊಡತಾರ್ರು ಅಂತ. ನಮ್ಮ ರಾಯ್ರಿಗೆ ಸಿಕ್ಕ್ಯತೋ ಇಲ್ಲೋ ಅಂತ ಸುಮಾಗ ಕೇಳ್ದಿ." ತನ್ನನ್ನು ಸಮರ್ಥಿಸಿಕೊಂಡು ಹೊರಡಲನುವಾದಳು ಮುದುಕಿ. ಅವಳಿಗೆ ತನ್ನ ಎಮ್ಮೆಯ ಚಿಂತೆ.

ವರುಷ ವರುಷವೂ ಹೆಚ್ಚು ಹೆಚ್ಚು ಕೊಡುವ ವೆಂಕಟರಮಣಾ ಏನಿರಬಹುದು? ಕೂದಲಿಲ್ಲದ ಬೋಳು ತಲೆಯನ್ನು ರಾಯರು ಕೆರೆದೇ ಕೆರೆದರು, ಚಿಂತಿಸಿದರು.

ಬುದ್ಧನು ಬೋಧಿ ಗಿಡದ ಬುಡಕ್ಕೆ ಕುಳಿತಂತಾಯಿತು. ವಿದ್ಯುತ್ಕಿರಣ ತಲೆಯಲ್ಲಿ ಹೊಳೆದು ಹೋಯಿತು. ಓಹ್, ಇದೇ ಎಂದರು ರಾಯರು, Increment ಉ.

"ಮುದುಕಿ", ಎಂದರು ರಾಯರು. "ತಿಳೀತು, ತಿಳೀತು. ವರ್ಸಾ ವರ್ಸಾ ಹೆಚ್ಚೆಚ್ಗಿ ಕೊಡುವ ವೆಂಕಟರಮಣ ಯಾವದು ಅಂತ, ಇಂಗ್ಲೀಷದಾಗ ಅದಕ್ಕ ಇನ್‌ಕ್ರಿಮೆಂಟ್ ಅಂತ ಅಂತಾರ".

ತನ್ನ ಮನೆಯ ಕಡೆಗೆ ಹಾಲು ಹಾಕುತ್ತಿದ್ದ ಮುದುಕಿ ತಿರುಗಿ ನಿಂತು ಹೇಳಿದಳು "ಇಂಗ್ಲೀಶದಾಗ ಆದೇನಂತಾರೋ ನಮ್ಮ ಬಾಯಿಗೆ ಬರಾಣಿಲ್ರಿ, ಎಂಕಟರಮಣಾ ಅಂತ ಅನ್ನಾಕ ಹಗರಾ, ತಿಳಕೊಣ್ಣಾಕೂ ಸುಲಬಾ."

ಇನ್‌ಕ್ರಿಮೆಂಟ್—ಎನ್‌ಕಿಟರಮೆಂ—ವೆಂಕಟರಮಣಾ—ಶಬ್ದೋತ್ಪತ್ತಿಯ ಶೋಧಕ್ಕಾಗಿ ರಾಯರು ತಮ್ಮ ಬೆನ್ನು ತಾವೇ ಚಪ್ಪರಿಸಿಕೊಂಡರು,

---

ರಂಗನೆಂಬ ಜಟ್ಟಿಯೊಬ್ಬ ಊರಲಿದ್ದನು
ಧಿಮ್ಮಿರಂಗ! ಯಾವುದನ್ನೂ ಎದುರುತಿದ್ದನು.
ನಾಗಕನ್ಯೆ ಒಮ್ಮೆ ಬರಲು
ಅವಳ ಜಡೆಯು ಹಿಡಿದು ಇವನು
ಹುತ್ತದೊಳಗೆ ಅವಳ ಜತೆಗೆ ಹೋಗೆಬಿಟ್ಟನು.

* * * *

ಕ್ಯಾಕರಿಸುತ್ತ ಹತ್ತಿ ಬಸ್ಸ ಕೂತನೊಬ್ಬನು
ಗಡ್ಡ ಮೀಸೆಯನ್ನು ಅವನು ನೀವುತಿದ್ದನು.
"ಇತ್ತ ನೋಡು I say
ಕೊಡು ಎಂಟು ಪೈಸೆ"
ಎಂದು ಕಂಡಕ್ಟರ ಕೇಳೆ, ಕೈಸೆ ಕೈಸೆ ಎಂದನು.

ಅಯ್ಯೋ ನನ್ನ ನಾಟಕವೇ

"ಟೆಂಪೆಸ್ಟ್ ನೋಡಿದಿರಾ ?" ಎಂದು ಕೇಳಿದ ನನ್ನ ಸ್ನೇಹಿತ. ಇಂಗ್ಲೆಂಡಿನಿಂದ ಷೇಕ್ಸಪಿಯರನ ನಾಲ್ಕುನೂರು ವರ್ಷಗಳ ಯಶಸ್ವೀ ನಾಟಕ ಜೀವನದ ನೆನಪಿಗೆ ನಮ್ಮ ಭಾರತದ ದೊಡ್ಡ ನಗರಗಳಿಗೆಲ್ಲಾ ಭೇಟಿ ಕೊಟ್ಟು ಅವನ ನಾಟಕ ಆಡಲು ಬಂದಿರುವುದನ್ನು ತಿಳಿದು ಕೇಳಿದ್ದ ನನ್ನ ಸ್ನೇಹಿತ ಕರುಣಾನಿಧಿ.

"ಟೆಂಪೆಸ್ಟ್ ನೋಡಿದೆ" ಎಂದೆ.

"ಅಂತಹ ಬಿರುಗಾಳಿ ಏಳಬೇಕಾದ್ದೆ ಕಣಯ್ಯೊ"

"ಏನು ಕೊಚ್ಚಿಕೊಂಡು ಹೋಗೋಕೆ ?"

"ನಮ್ಮ ಬಡತನವನ್ನು ಕೊಚ್ಚಿಕೊಂಡು ಹೋಗೋ ಬಿರುಗಾಳಿ ಏಳಬೇಕಾಗಿದೆ"

"ನಾಟಕದಲ್ಲಿನ ಬಿರುಗಾಳಿ Storm in a tea cup ಆದ ಹಾಗೆಯೇ ಅಲ್ಲವೆ ?"

"ನೀನು ಬಲೇ ನಾಟಕ ಆಡೀನೀಂತ ಜಂಬ ಹೊಡ್ಕೊತೀಯಲ್ಲಾ ನೋಡಯ್ಯ. ಇಂಗ್ಲೆಂಡಿನಿಂದ ಭಾರತಕ್ಕೆ ಬಂದು ಟೆಂಪೆಸ್ಟ್ ಎಬಿಸಿದ್ದಾರಲ್ಲಾ ಅದೂ ನಮ್ಮೂರ ರವೀಂದ್ರ ಕಲಾಕ್ಷೇತ್ರದಲ್ಲೀ . ಮೂರು ದಿನಾನೂ ಕಲಾಕ್ಷೇತ್ರ ಭರ್ತಿ ನಿಶ್ಶಬ್ದವಾಗಿ ಆಡಿದ ನೆಳಲು ಬೆಳಕಿನ ಇಂಗ್ಲೀಷ್ ಬೈಲಾಟವನ್ನು ಏನು ಶಾಂತವಾಗಿ ನೋಡಿ ಆ ಕಂಪನಿಯವರ ಜೋಬಿಗೆ ಭರ್ತಿ ದುಡ್ಡು ತುಂಬಿಸಿ ಕೊಟ್ರು. ಬೇರೇ ಊರಿಂದ ಬಂದು ಆಟ ಆಡಿದವರಿಗೇ ಯಾವಾಗಲೂ ನಾವು ಔದಾರ್ಯದ ಮಾಲೆ ಹಾಕಿ ಆಡಿದ್ದು ಅರ್ಥವಾಗದೇ ಇದ್ರೂ ಚಪ್ಪಾಳೆ ಹೊಡೆದು ನಮಗೂ ತಿಳೀತೂಂತ ಹಲ್ಗಿರೀತಾರೆ. ಬರೇ ಇಂಗ್ಲೀಷ್ ನಾಟಕಾನೇ ತಮಗೆ ಅರ್ಥವಾಗೋದೂ ಕನ್ನಡದಲ್ಲಿ ನಾಟಕಾ ಆಡೋರೇ ಇಲ್ಲ ಅನ್ನೋ ರೀತೀಲಿ ವಯ್ಯಾರಮಾಡಿಕೊಂಡು ಆಂಗ್ಲೋ ಕನ್ನಡ ಮಾತಾಡೊ ಅತಿ ಡೊಂಕಿನ ಕೃತಕ ವಯ್ಯಾರಿಗಳನ್ನು ಕಂಡರಂತೂ ನನ್ನ ಮೈಯೇ ಉರಿದು ಹೊಗುತ್ತೆ ನೋಡು..."

ಎಂದು ಕರುಣಾನಿಧಿ ಹಣೆಗಣ್ಣನಂತೆ ಎಗರಲಾಡಿದ. ಇದಕ್ಕೆ ನಾನೇನು ಮಾಡೋಕಾಗುತ್ತೆ ನಮ್ಮವರ ಜಾಯಮಾನವೇ ಅಷ್ಟು. ಇವನ್ನ ತಿದ್ದಲಿಕ್ಕೆ ಕಾವು

ಣ್ಣನನ್ನು ಸುಟ್ಟ ಹಣೆಗಣ್ಣನೇ ಹಿಮಗಿರಿಯಿಂದ ಇಳಿದುಬರಬೇಕು. ಕರುಣಾನಿಧಿ ಹೇಳೋದ್ರಲ್ಲಿ ನೂರಕ್ಕೆ ನೂರು ಪಾಲು ನನ್ನ ಒಪ್ಪಿಗೆ ಇತ್ತು.

"ಹೌದಪ್ಪಾ ಇದಕ್ಕೆ ನನ್ನ ಏನು ಮಾಡೂಂತ ಅಂತಿಯಾ ದೊರೇ"

"ನೀನು ಬಿರುಗಾಳಿ ಎಬ್ಬಿಸು ; ನಾನು ಈ ಕನ್ನಡಿಗರ ಬಡ ಉತ್ಸಾಹಕ್ಕೆ ಶ್ರೀಮಂತಿಕೆ ತುಂಬುತ್ತೇನೆ."

"ನಾನು ಸಿದ್ಧ. ಒಂದೇ ತಿಂಗಳಲ್ಲಿ ಕುವೆಂಪು ಅವರ 'ಬಿರುಗಾಳಿ' ಈ ಷೇಕ್ಸ್ ಪೀರರ ಕಂಪನಿ ಅವರಿಗಿಂತ ಒಂದು ಕೈ ಸೈ ಅನ್ನಿಸಿಕೊಳ್ಳುವಂತೆ ಮಾಡ್ಡಿದ್ರೆ 'ಥತ್' ಅನ್ನು. ನಮಗೆ ನಿಮ್ಮಂಥವರ ಬೆಂಬಲ ಸಿಕ್ಕಿದರೆ ಸಾಕು ಕಣೊ ಕರುಣಾನಿಧೀ ! ನಮ್ಮ ಕಲೆ ನೋಡಿ ಸಂತೋಷ ಪಡೊ ಜನಾ ಸಿಕ್ಕರೆ ಸಾಕು. ನಾವು ಟೆಂಪೆಸ್ಟಿನ 'ಏರಿಯಲ್' ನಂತೆಯೇ ಜಾದೂ ಮಾಡಿಬಿಡುತ್ತೇವೆ."

—ಎಂದು ಬಣ್ಣ ಬಳಿದುಕೊಳ್ಳುವ ಅವಕಾಶ ಸಿಕ್ಕರೆ ಸಾಕು ಎಂದು ಚಡಪಡಿಸುತ್ತಿದ್ದ ನಾನು ಒಂದು ನಾಟಕ ಆಡಲು ಆತುರನಾಗಿ ಹೇಳಿದೆ.

"ಮಿಸ್ಟರ್, ನಿನ್ನ ನಾಟಕ ಕಲೆ ಹತ್ತು ಜನಕ್ಕೆ ಉಪಯೋಗವಾಗದಿದ್ದರೆ ಅದನ್ನು ಸುಡು. ನಾನು ನಾನು ಎರಡೂವರೆ ಸಾವಿರ ಸೇರಿಸುತ್ತೇನೆ. ಬಡಹುಡುಗರ ನಿಧಿಗಾಗಿ ನೀನು ನಾಟಕ ಆಡು. ನೀನು ಆಡಿದ ನಾಟಕ ಸಾರ್ಥಕವಾಗತ್ತೆ. ಸುಮ್ಮನೆ ಚಿಲ್ರೆ ನಾಟಕ ಆಡಿ ಕಾಂಪ್ಲಿಮೆಂಟರಿ ಕೊಟ್ಟು ಬಲವಂತವಾಗಿ ಬೆನ್ನು ತಟ್ಟಿಸಿಕೊಂಡು ಹಾರ ಹಾಕಿದ ತಪ್ಪಿಗೆ ಹ್ಯಾಗಿದ್ದರೂ 'ಚೆಲೋದಾಗೇ ಅದ' ಎಂದು ಅನ್ನಿಸಿಕೊಳ್ತೀಯಾ !..."

—ಮುಗುಂ ಆಗಿ ಮುಟುಕಿಸೇ ಬಿಟ್ಟಿದ್ದ. ಮತ್ತೆ ನಾವು ಬರೆದ ನಾಟಕ ನಾವೇ ಆಡದಿದ್ದರೆ ಬೇರೆ ಯಾರು ಆಡಬೇಕು ? ಕಲಾವಿದರ ನವ್ಯ ಪ್ರಯೋಗ ಎಂದು ನಮ್ಮ ಕೊರಳಿಗೆ ನಾವೇ ಮಾಲೆ ಹಾಕಿಕೊಳ್ಳುವ ದೌರ್ಭಾಗ್ಯ ನಮ್ಮದು. ಈ ರೀತಿಯಲ್ಲಿ ಸಂಕಟಪಡುತ್ತಿದ್ದಾಗ ಕರುಣಾನಿಧಿಯೆ ಮತ್ತೆ ಮಾತಾಡಿದ.

"ಟೆಂಪೆಸ್ಟೇ ಆಡಬೇಕು, ತಿಳೀತೇ ? ರವೀಂದ್ರ ಕಲಾಕ್ಷೇತ್ರದಲ್ಲೇ ಆಗಬೇಕು. ಬಡ ಹುಡುಗರ ನಿಧಿಗೆ ಕರ್ಚು ಕಳೆದು ಸಾವಿರದೈನೂರು ಸಿಕ್ಕಿ ಉಳಿಯಬೇಕು. ಬಿರುಗಾಳಿ ಟೆಂಪೆಸ್ಟ್ ಟಿಕೆಟ್ ಮಾರೋ ಭಾರ ನಂದು. ಬಣ್ಣ-ಘರದೆ ರಿಹರ್ಸಲ್ಲು ಮಣ್ಣು ಮಸಿ ನಿಂದು-ತಾರೀಖು ವಾರ ತಿಂಗಳು ವರ್ಷ ನಿರ್ಧಾರ ಮಾಡಿ ಊರೆಲ್ಲಾ ಪ್ರಚಾರ ಮಾಡಿ, ನಿಧಿ ಕೂಡಿಸಿ, ನಿನ್ನ ನಾಟಕ ಚಟಕ್ಕೂ ಪ್ರೋತ್ಸಾಹ ಸಿಗೋಹಾಗೆ ಮಾಡದಿದ್ದರೆ ನಾನು ಕರುಣಾನಿಧಿಯೇ ಅಲ್ಲ.—"

—ಎಂದು ಮೀಸೆ ಇರಬೇಕಾದ ಕಡೆ ಕೈ ಆಡಿಸಿದ. ನಾನೂ ಸೈ ಎಂದು ಸವಾಲು ಹಾಕಿದೆ. ಅದೇ ಸಂಜೆ ನಮ್ಮ ನವ್ಯ ಕಲಾವಿದರ ಮಂಡಲಿ ಸೇರಿ ದಿನ ಗೊತ್ತುಮಾಡಿ ಪೂಜೆ ಮಾಡಿ ರಿಹರ್ಸಲ್ ಪ್ರಾರಂಭವೇ ಆಗಿಬಿಡ್ತು.

* * * *

ಕರುಣಾನಿಧಿ ಭರದಿಂದ ಕೆಲಸಕ್ಕೆ ತೊಡಗಿ ಬಡಹುಡುಗರ ನಿಧಿಗೆ ನಗರಾದ್ಯಂತ ಪ್ರಚಾರ ಮಾಡಿ ಊರೆಲ್ಲಾ ಇದೇ ಮಾತಾಡಿಕೊಳ್ಳುವ ಮಟ್ಟಕ್ಕೆ ತಂದಿಟ್ಟುಬಿಟ್ಟ. ನಮ್ಮ ಕೆಲಸ ಕೋಳಿಮೊಟ್ಟೆ, ಕೊಳೆತ ಟೊಮ್ಯಾಟೊಗಳು ಪ್ರೇಕ್ಷಕರಿಗೆ ಸಿಕ್ಕದಂತೆ ಮಾಡುವುದೆಷ್ಟೋ ಅಷ್ಟು ಆಯಿತು.

ದಿನಗಳಿಗೇನು, ಇಕ್ಕೊ ಅನ್ನುವುದರಲ್ಲಿ ಕಳೆದು ಹೋಗುತ್ತವೆ. ಆ ಮಹಾ ಸುದಿನವೂ ಬಂತು.

ಕರುಣಾನಿಧಿ ಹೊಸ ಉಣ್ಣೆ ಸೂಟು ಹೊಲೆಸಿದ್ದ (ಬಡ ಹುಡುಗರ ನಿಧಿ ಯಿಂದಲೆ ?) ನಮಗೂ ಆಗಷ್ಟು ಈಗಷ್ಟು ಕರ್ಚಿಗೆ ಕೊಟ್ಟಿದ್ದ. ನಮಗೆ ಹಣಕ್ಕಿಂತ ನಾಟಕ ಆಡುವ ಖಾಯಷ್ಟೆ ಹೆಚ್ಚಾಗಿದ್ದಿದ್ದರಿಂದ ದುಡ್ಡಿನ ಆಗುಹೋಗುಗಳ ಕಡೆ ಗಮನ ಕೊಟ್ಟಿರಲಿಲ್ಲ.

ಆದರೆ ಅಂದಿನ ಅಧ್ಯಕ್ಷತೆಗೆ ಬ್ಯಾಂಕರ್ ಬಸವಣ್ಣಪ್ಪನವರನ್ನು ಅವನು ಆರಿಸಿ ಅವರ ಉದ್ದದ ಹಾರಾ ತಂದಿದ್ದ. ಮೇಯರನ್ನೊ ಮಂತ್ರಿಗಳನ್ನೋ ಅಥವ ಯಾವು ದಾದರೂ ಬಡ ವಿದ್ಯಾರ್ಥಿ ನಿಲಯದ ವಾರ್ಡನ್ನನ್ನೊ ಕರೆಯಬಾರದಾಗಿತ್ತೆ ? ಈ ಮಾರ್ವಾಡಿ ಬಸವಣ್ಣಪ್ಪನಿಗೂ ನಾಟಕ ಕಲೆಗೂ ಏನು ಸಂಬಂಧ ! ಕರುಣಾನಿಧಿಯ ಆಳ ಅಂತರ ಬಲ್ಲವರಾರು ? ಇಷ್ಟಕ್ಕೂ ಅದರ ಗೋಜು ನಮಗೇಕೆ ? ನಾಟಕ ಆದ ಮೇಲೆ ನನಗೊಂದು ಹಾರಬಿದ್ದರೆ ಸಾಕು. ಇದು ನನ್ನ ವೈಯಕ್ತಿಕ ಅಭಿಪ್ರಾಯ. ಆದರೆ ಮಿರಾಂಡಾ ಪಾತ್ರಧಾರಿ ಕಾನ್ವೆಂಟಿನ ಪ್ರಮೀಳಾ ಅಪ್ಪಚ್ಚು ತಕರಾರು ತೆಗೆದಳು. ಬಸವಣ್ಣಪ್ಪನಿಗೆ ನಾಟಕ ಅರ್ಥವಾಗುವುದಿಲ್ಲವೆಂದೂ ಅವನು ಒಂದುರೀತಿಯಲ್ಲಿ ತನಗೆ ಮರ್ಚೆಂಟ್ ಆಫ್ ವೆನಿಸ್ಸಿನ ಜ್ಯೂ ಹಾಗೆ ಬಡ್ಡಿ ಹಾಕಿದ್ದಾನೆಂದೂ ಆ ಬಡ್ಡಿ ತೀರಿಸಲು ಅಸಹ್ಯಪರಿಹಾರ ಕೇಳಿದನೆಂದೂ ಅತ್ತಳು

" ನಾಟಕಕ್ಕೂ ಆ ವ್ಯವಹಾರಕ್ಕೂ ಸಂಬಂಧವಿಲ್ಲ. ಇದು ಕಲೆ. ಅದು ವ್ಯವಹಾರ ಥಿಯೆಟರಿಂದ ಹೊರಗೆ ಅದರ ಮಾತು. ತೆಪ್ಪಗೆ ಮೇಕಪ್ ಮಾಡ್ಕೊ "

ಎಂದು ಅಪ್ಪಚ್ಚುಗೆ ದಾರಿಗೆ ತರಬೇಕಾದರೆ ನಾನು ಜೂಲಿಯಸ್ ಸೀಸರನ ಆಂಟೋನಿಯಂತೆಯೇ ಮಾತಾಡಬೇಕಾಯಿತು.

ಕರುಣಾನಿಧಿಯ ತಾಕತ್ತಿಗೆ ಮೆಚ್ಚಿದ್ದೆ. ಜನ ತುಂಬಿ ತುಳುಕುತ್ತಿದ್ದರು. ನಾಟಕ ಒಂದು ಯಶಸ್ಸಾದರೆ ಸಾಕು ಎಂದೆ. ಅವನು " ಕಲೆಕ್ಷನ್ ಆಗೆದೆ ಬಿಡು, ನಾಟಕ ಹೆಂಗಾದರೂ ಆಗಲಿ " ಎಂದ. ನಾನು ಮತ್ತೆ ಮಾತೆ ಆಡಲಿಲ್ಲ.

'ನಾಟಕ ಆಯ್ತು' ಎಂದಿಷ್ಟು ಹೇಳ ಬಯಸುತ್ತೇನೆ. ನಮ್ಮ ಕಲಾಭಿಮಾನಿಗಳ ದೊಡ್ಡ ಮನುಷ್ಯರು ಅಳಲೂ ಇಲ್ಲ,ನಗಲೂ ಇಲ್ಲ. ಬರೇ ಕಡ್ಲೆಕಾಯಿ ಸುಲಿದ ಸದ್ದನ್ನು ಮಾತ್ರ ಮಾಡುತ್ತಿದ್ದರು. ವಂದನಾರ್ಪಣೆ. ಅಧ್ಯಕ್ಷರ ನಿಧಿ ಸಮರ್ಪಣೆಗೆ ಏರ್ಪಡಿಸಿ

ದಾಗ ಬಸವಣ್ಣಪ್ಪನವರಿಗೆ ಕರುಣಾನಿಧಿ ಹಾರಾ ಹಾಕಿ ಹೊಗಳುತ್ತಿದ್ದಂತೆಯೇ ಪ್ರೇಕ್ಷಕರಿಂದ ಬಿರುಗಾಳಿಯಂತೆ ಒಬ್ಬ ಚಿಮ್ಮಿ ಬಂದು ಮೈಕು ಹಿಡಿದ. ಆಂಟೋನಿಯಂತಿಯೇ ಆರ್ಭಟಿಸಿದ.

"ಫ್ರೆಂಡ್ಸ್, ಕನ್ನಡಿಗಾಸ್, Please lend me your ears .. I have not come here to praise this fellow .."

— ಎಂದು ನನ್ನ ಬೆರಳು ಮಾಡಿ ತೋರಿಸಿದ.

The evil that this man does lives after him "

— ಎಂದು ಕರುಣಾನಿಧಿಯನ್ನು ತೋರಿಸಿದ.

ಬಸವಣ್ಣಪ್ಪನವರು ಆಧ್ಯಕ್ಷತೆಯ ಆಸೆಗಾಗಿ ನೂರು ರೂಪಾಯಿನ ಡೊನೇಷನ್ನು ಕೊಟ್ಟಿದ್ದರು. ಈ ಬಿರುಗಾಳಿಯ ಭಾಷಣಕ್ಕೆ ಅವರು ಬೆದರಿ—

"ಕರುಣಾನಿಧಿ, ಎಷ್ಟು ಕೊಟ್ರೆ ಇವನು ಸುಮ್ಮಗೆ ಕುಂತಗಂತಾನೆ "—ಎಂದು ವಿಚಾರಿಸಿದ. ಬಿರುಗಾಳಿ ಬಿಡಲಿಲ್ಲ. ಒಂದೇ ಸಮ ಹೊಡಕೊಂಡ ಇವನಿಗೆ ಯಾವುದೋ ಸಿಟ್ಟು. ಬಾರಿ ಬಾರಿಗೆ ಪ್ರಮಿಳಾ ಅಪ್ಪಚ್ಚುವನ್ನು ನೋಡುತ್ತಿದ್ದ ಈ ಆಂಟೋನಿ, ಆಕೆಯು ಬಸವಣ್ಣಪ್ಪನ ಮೇಲೆ ಹೊಂದಿದ ಸಿಟ್ಟನ್ನೇ ಹೊಂದಿರಬಹುದೆಂದು ನಾನು ಊಹಿಸಿದ್ದೆ.

The Noble ಕರುಣಾನಿಧಿ Hath told you that ಬಸವಣ್ಣಪ್ಪ is a Honourable Man. When the poor have cried· This ಬಸವಣ್ಣಪ್ಪ hath laughed...ಈ ನಿಧಿ 'ಬಡ ಹುಡುಗರ ನಿಧಿ' ಯಾವ ಬಡ ಹುಡುಗರಿಗೆ—ಎಲ್ಲಿದ್ದಾರೆ ? ಅವರು ಯಾವ ಬಡ ಸಂಸ್ಥೆಗೆ ಈ ಕರುಣಾನಿಧಿ, ಈ ಕೂಡಿಸಿದ ನಿಧಿ ಕೊಡ್ತಾನೆ ಅನ್ನುವುದನ್ನ ನಾನು ತಿಳಿಯಬಯಸುತ್ತೇನೆ. ನಾವು ಬಡ ಜನರು. ಈ ಬಿರುಗಾಳಿ ನೋಡಲಿಕ್ಕೆ ತಂಡೋಪತಂಡವಾಗಿ ಬಂದಿದ್ದೇವೆ. ಈ ಬಿರುಗಾಳಿ ಎಬ್ಬಿಸಿದ ನಿಧಿ, ಬಡವರ ಗೋಳಿನ ಕಥೆಯನ್ನು ವರ್ಣಿಸಿದ ಈ ಕರುಣಾನಿಧಿ ನಮ್ಮಿಂದ 'ನಿಧಿ' ಕೂಡಿಸಿದ್ದಾನೆ. ಆದರೆ ಆ ನಿಧಿ ಯಾರ ಕೈ ಸೇರುತ್ತದೆ ನಾನು ತಿಳಿಯಬಯಸುತ್ತೇನೆ. ಈ ಬಸವಣ್ಣಪ್ಪನವರು ಮಹಾ ಮರ್ಯಾದಸ್ತರು But Brutus is an honourable Man—ಮಿರಾಂಡಾ ಪಾತ್ರಧಾರಿ ಪ್ರಮೀಳೆ ನಕ್ಕಳು. 'ನಾನು ಬೆಪ್ಪಾಗಿದ್ದೆ. ಕರುಣಾನಿಧಿ ಮೈಕಿನ ಮುಂದೆ ಬಂದ. ಧೈರ್ಯದಿಂದ ಮಾತನಾಡಿದ. ನಾಟಕದಲ್ಲಿ ನಾಟಕ ಬರೆದವನ ಮಾತನ್ನು ಗಟ್ಟಿಮಾಡಿ ಆಡುವ ನಾವು ಜೀವಂತ ನಾಟಕದಲ್ಲಿ ಪರಿಸ್ಥಿತಿಯನ್ನು ಚಾಣಾಕ್ಷನಂತೆ ಎದುರಿಸಿ ಸಂದರ್ಭದಲ್ಲಿ ಚತುರತೆಯಿಂದೆ ಮಾತಾಡುವ ರಾಜಕಾರಣಿಯಂತೆಯೇ ಮೈಕಿನ ಮುಂದೆ ನಿಂತಿದ್ದನು ಕರುಣಾನಿಧಿ. ಗಲಾಟೆಯನ್ನು ತಡೆದು ನಿಂತಿದ್ದ.

"Be patient till the end ಕನ್ನಡಿಗಾಸ್ ಕಂಟ್ರಿಮೆನ್ hear me for my cause ; and be silent that you may hear ; believe me for mine honour···censure me with wisdom ; and awake your senses that you may be the better Judge."

ಜನ ತಣ್ಣಗಾದರು. ಎಲಾ -ಇವನ ನಾಟಕದವರು ನಾಚಬೇಕು ಇವನ ಸಮಯ ಸ್ಫೂರ್ತಿಗೆ. ಜೂಲಿಯಸ್ ಸೀಸರನ ನಾಟಕದ ಬ್ರೂಟಸನ ಮಾತುಗಳನ್ನೇ ಹೇಳುತ್ತಿದ್ದ.

"Who is here so rude that would not be a ಕನ್ನಡಿಗ? who is here so vile that will not love his ಕರ್ನಾಟಕ ?... ಕನ್ನಡಿಗರೇ ನಿಮ್ಮೆಲ್ಲರ ಔದಾರ್ಯದ 'ನಿಧಿ' ಈ ಬಡ ಹುಡುಗರ ನಿಧಿ. ಈ ದೊಡ್ಡ ಮನುಷ್ಯ ನನ್ನ ನಿಧಿ ಸಂಗ್ರಹದ ಬಗ್ಗೆ ಸಂಶಯ ಪಟ್ಟಿದ್ದಾನೆ ಇದನ್ನು ಸರಿಯಾದ ರೀತಿ ತಿಳಿ ಹೇಳದಿದ್ದರೆ ನಾಳೆ ನಾನು ಯಾವ ಮುಖ ಇಟ್ಟುಕೊಂಡು ಎಲೆಕ್ಷನ್ನಿಗೆ ನಿಲ್ಲಲಿ...ಇದು ಈ ಹತ್ತೂಜನದ ದುಡ್ಡು ಬಡ ಹುಡುಗರ ನಿಧಿಗೇ ಹೋಗುತ್ತದೆ... ಉದಾರಮನಸ್ಸಿನ ಕನ್ನಡಿಗರೇ ಈ ನಾಟಕ ಒಂದು ನಿಮಿತ್ತ ಮಾತ್ರ ಆದರೆ ಈ ಸಂಗ್ರಹವಾದ ನಿಧಿ ಒಂದು ಬಡ ಹುಡುಗರ ಗುಂಪನ್ನೇ ಕಾಪಾಡುತ್ತದೆ. ನೀವು ನಾಟಕಕ್ಕಾಗಿ ಬಂದವರಲ್ಲ. ಈ ಬಸವಣ್ಣಪ್ಪನ ಮುಖ ನೋಡಲಿಕ್ಕೆ ಬರಲಿಲ್ಲ. ಈ ಹುಡುಗನ ಸಂದೇಹಾಸ್ಪದದ ಭಾಷಣ ಕೇಳಲಿಕ್ಕೆ ಬರಲಿಲ್ಲ. ಕೇವಲ 'ಬಡಹುಡುಗರ' ಸಹಾಯದ ದೃಷ್ಟಿಯಿಂದ ಬಂದಿದ್ದೀರಿ...ನಾನು ಘಂಟಾಘೋಷವಾಗಿ ಧೈರ್ಯದಿಂದ ಯಾವ ಕಳ್ಳತನದ ಅಪರಾಧ ಹೊತ್ತವನಂತೆಯೂ ಅಲ್ಲದ ಸತ್ಯವಂತ ಸಿಂಪಲ್ ಸಿಟಿಜನ್ ರೀತಿಯಲ್ಲಿ ಹೇಳುತ್ತಿದ್ದೇನೆ...ಇದು ಬಡ ಹುಡುಗರ ನಿಧಿಗಾಗಿ..."

"ಆ ಭಡವರು ಯಾರು ?"

"ಕ್ಷಮಿಸಬೇಕು...ಬಡಹುಡುಗರು...ನನ್ನ ಹುಡುಗರೇನು ಶ್ರೀಮಂತರೆ ? ಸುಳ್ಳೇಕೆ ಹೇಳಬೇಕು...ಈ ನಿಧಿ ಬಡ ಹುಡುಗರ ನಿಧಿ ಆ ಬಡ ಹುಡುಗರು ಶ್ರೀಮಂತರಲ್ಲದ ನನ್ನ ಸ್ವಂತ ಹೆಂಡ್ತಿ ಆರು ಜನ ಮಕ್ಕಳೂ-ಮತ್ತೆ ಮೊದಲನೆ ಹೆಂಡ್ತಿಯ ಏಳು ಮಕ್ಕಳ ಉದ್ಧಾರಕ್ಕೆ ಸೇರಿಸಿದ ಹಣ ಈ ಬಡ ಹುಡುಗರ ನಿಧಿ"

ಎಂದಾಗ ನಾನು ಮೂರ್ಛೆ ಹೋದದ್ದು ನೆನಪು. ಅಷ್ಟೆ ಮುಂದೇನಾಯಿತೋ ಕಾಣೆ—ನಾಟಕದ ಹುಚ್ಚಂತೂ ಇಳಿದಿದೆ.

— ದಾಶರಥಿದೀಕ್ಷಿತ್

★ ಪ್ಯಾರಿಸ್ಸಿನಲ್ಲಿ ಎರಡನೆ ರಾತ್ರಿ ★

★

ಪ್ಯಾರಿಸ್ಸಿನಲ್ಲಿ ಮೊದಲರಾತ್ರಿ ಕಳೆದು ನಿದ್ರೆ ಸಾಲದಿದ್ದುದರಿಂದ, ಬೆಳಗಾದಾಗ ಕಣ್ಣುಗಳು ಉರಿಯುತ್ತಿದ್ದುವು. ಆಸ್ಪತ್ರೆಗಳನ್ನು ನೋಡಿಕೊಂಡು ಬರುವ ಉತ್ಸಾಹದಲ್ಲಿ, ಕಣ್ಣುಗಳನ್ನು ಉಜ್ಜಿಕೊಂಡೇ, ದಿನವನ್ನು ಕಳೆದೆ. ಜೈನರ ತರಹ ರಾತ್ರಿ ಬೇಗ ಊಟ ಮಾಡಿ ಮಲಗಿಬಿಡೋಣ ಅಂತ ತಿರ್ಮಾನಿಸಿದ್ದೆ.

ಆದರೆ ಊಟ ಮುಗಿದಾಗ ತೆಲುಗು ಸೋದರನೊಬ್ಬ ನನಗೆ ಗಂಟುಬಿದ್ದ, ಅವನಿಗೆ ಅರವತ್ತರ ಪ್ರಾಯ. ಹಿಂದಿನ ರಾತ್ರಿ ಅವನು ಹೋಟಲಿನಲ್ಲೇ ಬೇಗ ಮಲಗಿದ್ದ, ನಾವೆಲ್ಲಾ ಲೀಡೋಗೆ ಹೋಗಿ ಬಂದುದು ಅವನಿಗೆ ಗೊತ್ತಾಗಿತ್ತು. ಆ ಕಾರಣ ಅವನನ್ನು ಹಿಡಿದು " ಬಾರಯ್ಯಾ ! ಇವತ್ತು " ಫೋಲೀಸ್ ಬರ್ಜೇರ್ "ಗೆ ಹೋಗಿ ಬರೋಣ, ಇಷ್ಟು ದೂರ ಬಂದು, ಪ್ಯಾರಿಸ್ಸಿನಲ್ಲಿ ಇದ್ದು, ಏನೂ ನೋಡದೆ ಹಿಂತಿರುಗಿದರೆ ಬಿಕೋ ಅನ್ನಿಸುತ್ತೆ. ಅಲ್ಲದೆ ಊರಿಗೆ ಹೋದಮೇಲೆ, ಹೆಂಡತಿ ಕೇಳಿದಾಗ ಏನು ನೋಡಿಕೊಂಡು ಬಂದ್ರಿ ಅಂತ. ಆಗ ಏನು ಹೇಳೋದು ?" ಎಂದು ಪುಸಲಾಯಿಸುಕ್ಕೆ ಶುರುಮಾಡಿದ. " ಪ್ರಾಚೀನ ಕರ್ಮ ! ನೋಡೋದಾದರೆ ನೋಡಬಹುದು ನಾವು ನೋಡಿದನ್ನ ತಿಳಿದವರ್‍ಯಾರೂ ನೋಡೋದಿಲ್ಲವಲ್ಲ ! ಅಂದಮೇಲೆ ಅವಮಾನ ಏನು ? ಆದರೆ ಊರಿಗೆ ಹೋಗಿ ಧರ್ಮಪತ್ನಿ ಎದುರಿಗೆ ಕೂತು ಇಂತಿಂತಹದನ್ನೆಲ್ಲಾ ಈ ಕಣ್ಣುಗಳಿಂದಲೇ ನೋಡಿದೆ. ಅಂತ ಹೇಳಬಹುದೇ? ಹಾಗೆ ಕೇಳಿದಾಗ ಆಕೆ ಧರ್ಮಕ್ಕೆ ಸಿಕ್ಕ ಪತ್ನಿಯಾಗಿರುವುದರಿಂದ ಕಸಪರಿಕೆ ತೆಗೆದುಕೊಂಡು ಮುಖಾನ ಗುಡಿಸುಲ್ವೇ ? ಹೀಗೆಲ್ಲಾ ನನ್ನ ಮನಸ್ಸಿಗೆ ತೋಚಿತು, ಅದರ ಜತೆಗೇ ಅನ್ನಿಸಿತು ; " ಹೆಂಡತಿ ಎದುರಿಗೆ ಇದನ್ನೆಲ್ಲಾ ನಾಚಿಕೆಯಿಲ್ಲದೆ ಹೇಳಿಕೊಳ್ಳುವ ಈ ಪೆಂಗ ಇನ್ನೇನು ಪೆಚ್ಚುತನ ಮಾಡ್ತಾನೋ, ನೋಡೋಣವೇ " ಅನ್ನಿಸಿತು.

ಆದರೂ ಕಣ್ಣುರಿ. ಸ್ವಲ್ಪ ಜಾಣತನ ಉಪಯೋಗಿಸಿದೆ. " ನೋಡಯ್ಯಾ ! ಮಿತ್ರ ! ನನ್ನ ಹತ್ತಿರ ಹಣವಿಲ್ಲ. ಬಡವ ನಾನು. ನನ್ನ ಹಿಡಿದುಕೊಂಡು ಯಾಕೆ ಸತಾಯಿಸ್ತೀ " ಎಂದು ನಮ್ಮ ಸರ್ಕಾರದ ತರಹಾನೇ ಸಬೂಬು ಹೇಳಿದೆ. ಆತನ ಆತುರ ಅಸಾಧ್ಯ ? "ಆದಕ್ಕೆ ಯಾಕೆ ಯೋಚನೆ ? ನನ್ನ ಖರ್ಚಿನಲ್ಲೇ ಹೋಗೋಣ " ಎಂದು ತಕ್ಷಣ ಹೇಳಿದ.

" ಪುಕಟ್ಟು ಸಿಗೋದಾದರೆ ಚಿಕ್ಕಪ್ಪನ್ನ ಕರಕೊಂಡು ಬರ್ತೀನಿ" ಅಂತ ತೆಲುಗಿನಲ್ಲಿ ಒಂದು ಗಾದೆ ಇದೆ ಈ ಗಾದೆಯು ಜ್ಞಾಪಕಕ್ಕೆ ಬಂತು. " ಆಗಲಪ್ಪ ಹೋಗೋಣ " ಎಂದು ಒಪ್ಪಿಕೊಂಡೆ.

ತೆಲುಗು ಮಿತ್ರ ಬಲು ಬೇಗ ಶೃಂಗಾರ ಮಾಡಿಕೊಂಡ. ಜೇಬಿನಿಂದ ನಾಲ್ಕು ಯಾಲಕ್ಕಿಕಾಳು ತೆಗೆದು, ನನಗೆ ಕೊಡುತ್ತಾ " ಮೈಗೆ ಒಳ್ಳೇದು. ಎರಡು ಬೀಜ ಬಾಯಿಗೆ ಹಾಕಿಕೋ " ಎಂದು ಹೇಳಿದ. ಯಾಲಕ್ಕಿ ಅಗಿಯುತ್ತಾ ಇಬ್ಬರೂ ನಿಶಾಚರರಂತೆ " ಫೋಲೀಸ್ ಬರ್ಜರ್ " ಕಡೆಗೆ ಹೊರಟೆವು.

"ಫೋಲೀಸ್ ಬರ್ಜರ್" ಮಂದಿರಕ್ಕೆ ಹೋದಾಗ, ತೆಲುಗು ಮಿತ್ರ ನನ್ನ ಕೈಲಿ ಹಣ ಕೊಟ್ಟು "ನೀನೇ ಟಿಕೆಟ್ ತೆಗೆದುಕೋಪ್ಪ, ಆ ಹೆಂಗಸಿನ ಹತ್ತಿರ ಹೋಗಿ ಎರಡು ಟಿಕೇಟ್ ಕೊಡಿ ಎಂದು ಕೇಳಲು ವಾವಮಾನಿಕೆ" ಎಂದ. ಇಷ್ಟನ್ನು ಹೇಳುವಾಗಲೇ, ಅವ ಬೆವತು ನೀರಾಗಿದ್ದ. ಮುಖ ನೋಡಿಯೇ ಮೈ ಬೆವರೋ ಈ ಗಂಡು ಯಾಕಾರೋ ಬಂದ ? ಎಂದು ಶಂಕೆಯೇನೋ ಬಂತು. ಆದರೂ ಕಾಲ ಮಿರಿ ಹೋಗಿತ್ತು. ನಾನೇ ಮುಂದೆ ಹೋಗಿ ಟಿಕೆಟ್ ತೆಗೆದುಕೊಂಡೆ. ಒಬ್ಬೊಬ್ಬರಿಗೂ ಇಪ್ಪತ್ತು ಇಪ್ಪತ್ತು ರೂಪಾಯಿ ಅಂತ ಕಸಿದುಕೊಂಡರು. ಉದ್ದಾನೆ ರವಿಕೆ, ಮತ್ತು ಚಡ್ಡಿ ಧರಿಸಿದ ಹುಡುಗಿಯೊಬ್ಬಳು ನಮ್ಮನ್ನು ಕರೆದುಕೊಂಡು ಹೋಗಿ ನಮ್ಮ ನಮ್ಮ ಸ್ಥಳಗಳಲ್ಲಿ ಕೂರಿಸಿದಳು. ಕೂರಿಸಿ ನಮ್ಮನ್ನೇ ನೋಡುತ್ತ, ಕೈಯನ್ನು ಮುಂದೆ ಹಿಡಿದಳು. ಹತ್ತು ರೂಪಾಯಿನಷ್ಟು ಹಣವನ್ನು ಭಕ್ಷೀಷ್ ಆಗಿ ಕೊಟ್ಟೆ. ನನ್ನದಲ್ಲವಲ್ಲಾ ಹಣ! ಧಾರಾಳವಾಗಿರಬಹುದಲ್ಲ ? ಆದರೆ ತೆಲುಗು ಮಿತ್ರ ಮುಖ ಶಿಂಡರಿಸಿಕೊಂಡ. "ಅಷ್ಟು ಹಣ ಭಕ್ಷೀಷ್ ಕೊಡೋದೇನಯ್ಯಾ ?" ಎಂದು ಗೊಣಗುಟ್ಟಿದ. "ಅಲ್ಲಯ್ಯೊ ಮಿತ್ರ ! ಹಾಕಿಕೊಳ್ಳುಕ್ಕೆ ಪಾಪ ! ಆಕೀಗೆ ಲಂಗ ಇಲ್ಲ. ಬರೀ ಚಡ್ಡಿ ಧರಿಸಿದ್ದಾಳೆ. ಈ ಊರಿನಲ್ಲಿ ಛಳಿ ಹೆಚ್ಚು, ಅಂದಮೇಲೆ ಎಷ್ಟು ಕಷ್ಟ ಪಡ್ತಾ ಇರಬೇಕು, ಅವಳು. ಬಡವೆ, ಅಂತ ತೋರಿತು, ಅದಕ್ಕೇ ಸ್ವಲ್ಪ ಹಣ ಹೆಚ್ಚಾಗಿ ಕೊಟ್ಟಿರಬಹುದು." ಎಂದು ಸಮಾಧಾನ ಹೇಳಿದೆ. "ಊರಿನಲ್ಲಿದ್ದಾಗ ಪತ್ರಿಕೆಗಳಲ್ಲಿ ಓದಿದ್ದೆ. ಪ್ಯಾರಿಸ್ಸಿನ ರಾತ್ರಿ ಮಂದಿರಗಳಲ್ಲಿ ಭಕ್ಷೀಷ್ ಕೊಡೋವಾಗ ಅವರನ್ನು ಹಗೂರಾಗಿ ಜಿಗುಟಲೂ ಬಹುದು ಅಂತ. "ನೀನು ಕೊಟ್ಟ ಭಕ್ಷೀಷಿಗೆ ನಾವಿಬ್ಬರೂ ಅವಳನ್ನು ಸ್ವಲ್ಪ ಜಿಗುಟಬಹುದಾಗಿತ್ತಲ್ಲಯ್ಯಾ" ಎಂದು ತೆಲುಗು ಮಿತ್ರ ಸಂತಾಪ ಪಡುಕ್ಕೆ ಶುರು ಮಾಡಿದ. "ಅಯ್ಯಾ ! ಪೆಂಗ ! ಯಾವುದೋ ಊರಿನಲ್ಲಿ ಇದೇವೆ. ಈ ಕರಿ ಬೆರಳುಗಳಿಂದ, ಹಾಲು ಬೆಳ್ಳಗಿರುವ ಆಕೆಯನ್ನು ಜಿಗುಟಬಹುದೇನಯ್ಯಾ ! ಆಕೆ ಪಾದದಲ್ಲಿರೋದನ್ನು ಕೈಗೆ ತೆಗೆದುಕೊಂಡು "ನೂರು ರೂಪಾಯಿ ಕೊಡಿ, ಇಲ್ಲವೆ ಇದ್ದರೆ ಎರಡು ಮಡಗ್ತೀನಿ, ಎಲ್ಲರ ಎದುರಿಗೂ," ಅಂತ ರೇಗಿದರೆ, ನಮ್ಮ ಗತಿ ಏನಯ್ಯಾ ? ನಮ್ಮ ಹತ್ತಿರ ಉಳಿದಿರೋದು ಹತ್ತು ರೂಪಾಯಿ ಮಾತ್ರ, ಎಂದು ಎಚ್ಚರಿಸಿದೆ.

ಆ ವೇಳೆಗೆ ರಂಗಮಂಟಪದ ಹೊರತೆರೆಯು ಎತ್ತಲ್ಪಟ್ಟಿತು. ನಾವು ಕೂತಿದ್ದ ಕಡೆಯಿಂದ ರಂಗಮಂಟಪವು ಸುಮಾರು ಒಂದು ಮೈಲಿ ದೂರದಲ್ಲಿದ್ದಂತೆ ಕಾಣಿಸಿತು. ಅಲ್ಲದೆ ನಾವು ಬಾಲ್ಕೊನಿಯಲ್ಲಿ ಕೂತಿದ್ದೆವು. ಹಾಗಾಗಿ ಪಾತಾಳದಲ್ಲಿ ಎಲ್ಲೋ ದೃಶ್ಯಗಳನ್ನು ಕಂಡಂತಾಗುತ್ತಿತ್ತು.

ಮೊದಲು ಯಥಾಪ್ರಕಾರ ಹುಡುಗಿಯರ ತಂಡವೊಂದು ಕುಣಿಯುತ್ತಾ ಬಂದು ಡ್ರಿಲ್‌ಮಾಡಿ ಹೋಯಿತು.

ತೆಲುಗು ಮಿತ್ರ ನನಗೆ ತಗುಲಿಕೊಂಡು ಪಿಸುದನಿಯಲ್ಲಿ ಏನಯ್ಯಾ ! ಬೆತ್ತಲೆ ಇದ್ದ ಹಾಗೆ ಕಾಣುತ್ತಲ್ಲಾ, ಅವರೆಲ್ಲಾ ! ಇಲ್ಲಿನ ಸರಕಾರ ಇದಕ್ಕೆಲ್ಲಾ ಅವಕಾಶ ಕೊಡತ್ತಲ್ಲಯ್ಯಾ ? ನಮ್ಮೂರಿನಲ್ಲಿ ಸಿನಿಮಾದಲ್ಲಿ ಕೂಡ ಇಂತಹದನ್ನು ತೋರಿಸಕೂಡದಲ್ಲಯ್ಯಾ ?" ಎಂದು ಅಚ್ಚರಿಯಿಂದ ಕೇಳಿದ.

"ಹಾಗಲ್ಲ ! ಏರಿ. ಅವರೆಲ್ಲಾ ಚರ್ಮದ ಬಣ್ಣದ ಬಿಗಿ ಉಡುಪನ್ನು ಧರಿಸಿರುತ್ತಾರೆ. ಆದುದರಿಂದ ಕಾನೂನಿಗೆ ವಿರೋಧವಲ್ಲ. ಪಿಸುಮಾತಿನಲ್ಲಿ ಕೇಳಬೇಕಾಗಿಲ್ಲ. ಧೈರ್ಯವಾಗೇ ಕೇಳಬಹುದು " ಎಂದು ಅವನ ಮನಸ್ಸಿಗೆ ತುಂಬಾ ತ್ರಾಸು ಆಗದೇ ಇರಲಿ, ಅಂತ, ಹೇಳಿದೆ.

" ಇರಬೇಕು ! ಇಲ್ಲದೆ ಇದ್ದರೆ ಯಾವ ಮರ್ಯಾದಸ್ಥರು ಎಲ್ಲರೆದುರಿಗೂ ಹೀಗೆ ಬರೋದು " ಎಂದು ಅವ ನುಡಿದಾಗ, ನನಗ್ಯಾಕೋ ಸ್ವಲ್ಪ ರೇಗಿತು.

ಕೈಲಾಸಂ ಒಮ್ಮೆ ಬೈಸಿಕಲ್ಲಿನ ಮೇಲೆ ಹೋಗುತ್ತಿದ್ದಾಗ, ಪಂಚೆ ತುದಿ ಸೈಕಲ್ ಚೈನಿಗೆ ಸಿಕ್ಕಿಹಾಕಿಕೊಂಡು ಬಿಡ್ತು. ಬೈಸಿಕಲ್ ನಿಂತಿತು. ಬಾಗಿತು, ಮೆಲ್ಲಗೆ ಕೂತು, ಚೈನಿನಿಂದ ಪಂಚೆತುದಿಯನ್ನು ಹಗೂರಾಗಿ ಬಿಡಿಸಲು ಶುರುಮಾಡಿದರು. ತೊಡೆಯು ಸ್ವಲ್ಪ ಕಾಣಿಸುತ್ತಿತ್ತು. ಅಲ್ಲೇ ಹೋಗುತ್ತಿದ್ದ ಸರಿಗೆ ರುಮಾಲು ಧರಿಸಿದ್ದ ಕಚ್ಚೆ ಪಂಚೆ ಉಟ್ಟಿದ್ದ, ಗಂಧಾಕ್ಷತೆಯನ್ನು ಧಿಮಾವಾಗಿ ಹಾಕಿದ್ದ ಸರ್ಕಾರಿ ಅಧಿಕಾರಿಯೊಬ್ಬರು ಕೈಲಾಸಂರವರ ತೊಡೆಯನ್ನು ನೋಡಿ, " ನಾಚಿಕೆ ಆಗುಲ್ಲವೇನ್ರೀ ! ನಿಮಗೆ ! ಇಷ್ಟು ವಯಸ್ಸಾಗಿದೆ ! (ಕೈಲಾಸಂರವರ ತೊಡೆಯನ್ನು ಬೆರಳುಮಾಡಿ ತೋರಿಸುತ್ತಾ) ಹೀಗೆ, ಹೀಗೆ, ಪಬ್ಲಿಕ್ ರಸ್ತೆಯಲ್ಲಿ !!" ಎಂದು ರೇಗುತ್ತಾ ಹೇಳಿದರು.

ಕೈಲಾಸಂಗೆ ರೇಗಿತು. ದುರುಗುಟ್ಟಿಕೊಂಡು ಆತನನ್ನೇ ನೋಡಿದರು.. ಎದ್ದು ನಿಂತರು. ಪಂಚೆ ಬೈಸಿಕಲ್ ಜತೆಗೆ ಉಳಿದುಕೊಂಡಿತು. ಚಡ್ಡಿಧಾರಿಯಾಗಿ ಜಟ್ಟಿಯಂತೆ ಕೈಲಾಸಂ ನಿಂತರು. ಏನ್ರೀ ! ನೀವು ಹೇಳ್ತಾ ಇರೋದು. ಅಲ್ಲಾ ಬೊಗಳ್ತಾ ಇರೋದು ? ಯಾರಿಗೇರ‍್ರಿ ನಾಚಿಕೆ, ಯಾತಕ್ಕ್ರೀ ನಾಚಿಕೆ !!

(ಬೀದೀಲಿ ಹೋಗ್ತಾ ಇದ್ದವರನ್ನು ಉದ್ದೇಶಿಸಿ) ನೀವು ಬನ್ನಿರ್ರಿ, ನ್ಯಾಯ ತೀರಿಸ್ರಿ, ಎಲ್ರೂ ಬನ್ರಿ, ಎಂದು ಕೂಗಿ ಹತ್ತು ಜನ ಗಿರಕಾಯಿಸಿಕೊಂಡಾಗ "ನೋಡ್ರಿ, ಮಹಾಜನರೇ ! ಪಂಚೆ ತುದಿ ಸೈಕಲ್ ಚೈನಿಗೆ ಸಿಕ್ಕಿಕೊಂಡಿತು ಬೈಸಿಕಲ್ ನಿಲ್ಲಿಸಿ, ಮುದುಡಿಕೊಂಡು ಕೂತು ಪಂಚೆ ಬಿಡಿಸಿಕೊಳ್ಳುತ್ತಿದ್ದೆ, ಈತ, ಸರಿಗೆ ರುಮಾಲ್

ಕಟ್ಟಿಕೊಂಡ ಮರ್ಯಾದಸ್ಥ, ನನ್ನನ್ನೂ ನೋಡ್ತಾ ನಿಂತುಕೊಂಡ. ನನ್ನ ತೊಡೇನೇ ನೋಡ್ತಾ ನಿಂತುಕೊಂಡ. ನೀವು ಹೇಳ್ರಿ ನ್ಯಾಯಾನ ! ಕಷ್ಟದಲ್ಲಿ ಸಿಕ್ಕಿಹಾಕಿಕೊಂಡ ನನಗೆ ನಾಚಿಕೆ ಇಲ್ವೆ ! ಅಥವಾ ನನ್ನನ್ನೇ ನೋಡ್ತಾ ನಿಂತುಕೊಂಡ ಈ .. ಈ... ನವ ರಾತ್ರಿ ಪಟ್ಟದ ಬೊಂಬೆಗೆ ನಾಚಿಕೆ ಇಲ್ಲವೇ ? ನೀವು ತೀರಿಸ್ರಿ ನ್ಯಾಯಾನ !" ಎಂದು ದೊಡ್ಡ ದನಿಯಲ್ಲಿ ಗರ್ಜಿಸಿದರು.

ಪಾಪ ! ಆತನ ಬಣ್ಣ ಪಟ್ಟದ ಬೊಂಬೆಗಳ ಬಣ್ಣವೇ ! ಆದೂ ಕರಿಮರದಲ್ಲಿ ಮಾಡಿದ ಬೊಂಬೆ. ಅಂತಹಾ ಮುಖದಲ್ಲಿಯೂ ಕೂಡ, ಕೈಲಾಸಂ ನ್ಯಾಯತೀರಿಸಿ ಎಂದು ಸಕಾರಣವಾಗಿ ಎಲ್ಲರೂ ಒಪ್ಪುವಂತೆ ಕೇಳಿದಾಗ, ಕೆಂಪು ಛಾಯೆ ಕಾಣಿಸಿತು. ಆ ಚರ್ಮದಲ್ಲಿ ಕೆಂಪು ಛಾಯೆ ಕಾಣಿಸುವ ಹಾಗಾಗಬೇಕಾದರೆ, ಆತನಿಗೆ ಎಷ್ಟು ಅವ ಮಾನ ಆಗಿರಬೇಕು ? ಅವನ ತಪ್ಪು ಎಷ್ಟು ತೀಕ್ಷ್ಣವಾಗಿ ತಿಳಿದಿರಬೇಕು ? ತಲೆ ತಗ್ಗಿಸಿ ಕೊಂಡು ಆತ ಮಾಯವಾದ.

ಈ ಘಟನೆ ಜ್ಞಾಪಕಕ್ಕೆ ಬಂತು. ತೆಲುಗು ಮಿತ್ರ ಮರ್ಯಾದಸ್ಥರು ಹೀಗೆ ಎಲ್ಲರೆ ದುರಿಗೂ ಕಾಣಿಸಿಕೊಳ್ಳುತಾರೆಯೇ ಎಂದಾಗ, ನಾನೂ ಉತ್ತರಿಸಿದೆ, " ಅಲ್ಲಾ ! ಮಗನೆ, ಹೊಟ್ಟೆ ಪಾಡಿಗೆ ಹೊಟ್ಟೆ ತೋರಿಸಿಕೊಂಡು ಕುಣಿಯೋರಿಗೆ ಮರ್ಯಾದೆ ಇಲ್ಲವೊ ? ಅಥವಾ ಅದನ್ನು ದುಡ್ಡು ಕೊಟ್ಟು ಕೊಂಡು ಬಂದು, ಕಣ್ಣುರೆಪ್ಪೆ ಹಾರಿಸದೆ ನೋಡ್ತಾ ಇರುವ ನಿನಗೆ ಮರ್ಯಾದೆ ಇಲ್ಲವೋ ? ಯಾರನ್ನಾದರೂ ಕೇಳೋಣವೇ " ಎಂದೆ

" ಅಷ್ಟು ಗಟ್ಟಿಯಾಗಿ ಕೂಗಬೇಡಪ್ಪಾ ! ಎಲ್ಲರೂ ನಮ್ಮನ್ನೇ ನೋಡ್ತಾ ಇದಾರೆ, ನನಗೆ ನಾಚಿಕೆಯಾಗ್ತಾ ಇದೆ " ಎಂದ ತೆಲುಗು ಮಿತ್ರ.

ಇದರಿಂದ ಒಂದು ಪ್ರಯೋಜನ ಆಯಿತು, ಆಮೇಲೆ, ಎಲ್ಲಾ ಮುಗಿದು ಹೊರಗೆ ಹೋಗೋತನಕ, ಅವ ತಿರುಗಿ ನನ್ನನ್ನು ಸತಾಯಿಸಲಿಲ್ಲ. ಅತಿ ಭಯಂಕರವಾದ ಶಿಕ್ಷೆ ಯಾವುದು, ಎಂದು ಯಕ್ಷ ನನ್ನನ್ನು ಕೇಳಿದರೆ 'ಅಂದು ಧರ್ಮರಾಯನನ್ನು ಕೇಳಿದ ಹಾಗೆ' ಸಿನಿಮಾ, ನಾಟಕ ಇತ್ಯಾದಿ ಸಭೆಗಳಲ್ಲಿ ಪಕ್ಕದಲ್ಲಿ ಕೂತವನು, ಏನೂ ತಿಳಿಯದೆ ಇದ್ದವನು, ಏನಾಗ್ತಾ ಇದೆ, ಯಾಕಾಗ್ತಾ ಇದೆ ಅಂತ ಪ್ರಶ್ನೆ ಕೇಳ್ಳು ವುದೇ, ಅತಿ ಭಯಂಕರ ಶಿಕ್ಷೆ ಎಂದು ಹೇಳುತ್ತಿದ್ದೆ.

ಅಷ್ಟು ಹೊತ್ತಿಗೆ ರಂಗಮಂಟಪದ ಮೇಲೆ ಸುಮಾರು ನಾಲ್ವತ್ತರ ಹೆಣ್ಣೊಂದು ಬಂದು ನಿಂತಿತು. ಅಷ್ಟು ದೂರದಿಂದ ಆಕೆ ಚೆಲುವೆಯೋ ಅಲ್ಲವೋ ಹೇಳಲು ಬರು ತ್ತಿದ್ದಿಲ್ಲ. ಆದರೂ ಹಾಕಿದ್ದ ಉದ್ದಾನೆ ಲಂಗ ಥಳಥಳಿಸುತ್ತಿತ್ತು. ಮೈ ಕೈ ತುಂಬಿ ಕೊಂಡಿತ್ತು. ಬೇಲೂರಿನ ಶಿಲಾಬಾಲಿಕೆಯರ ತರಹ ಮೈ ದುಂಡು ದುಂಡಾಗಿ ತುಂಬಿ ಕೊಂಡಿತ್ತು. ಪ್ರೇಕ್ಷಕರನ್ನು ಉದ್ದೇಶಿಸಿ ಆಕೆ ಮಾತನಾಡಲು ಪ್ರಾರಂಭಮಾಡಿದಳು ಫ್ರೆಂಚಿನಲ್ಲಿ ಮೊದಲು, ಅನಂತರ ಇಂಗ್ಲೀಷಿನಲ್ಲಿ.

ನಾಲ್ಕು ಜನ ಮಹನೀಯರು ರಂಗಮಂಟಪದಮೇಲಕ್ಕೆ ಬರಬೇಕೆಂದು ಬಿನ್ನವಿಸಿಕೊಳ್ಳುತ್ತೇವೆ. ಇಂದಿನ ಕಾರ್ಯಕ್ರಮಕ್ಕೆ ನನ್ನ ಭುಜಕ್ಕೆ ಭುಜ ಕೊಟ್ಟು ಸಹಾಯಮಾಡುವವರು ಬೇಕು. ದಯವಿಟ್ಟು ಬನ್ನಿ" ಎಂದು ಕೋಕಿಲಕಂಠದಲ್ಲಿ ಕೇಳಿಕೊಂಡಳು. ಧ್ವನಿವರ್ಧಕ ಯಂತ್ರವು ಬಲು ಅಚ್ಚುಕಟ್ಟಾಗಿ ಕೆಲಸ ಮಾಡುತ್ತಿತ್ತು ಮೇಲುಸಿರನ್ನು ಆಕೆ ಬಿಟ್ಟರೂ ಕೇಳಿಸುತ್ತಿತ್ತು.

ಪ್ರೇಕ್ಷಕರಲ್ಲಿ, ನಾಲ್ಕು ಜನ ಮುಂದುಗಡೆ ಕೂತಿದ್ದವರು, ಎದ್ದು ರಂಗಮಂಟಪವನ್ನು ಹತ್ತಿ ಹೋದರು. ತನ್ನ ಸುತ್ತಲೂ ನಾಲ್ಕು ದಿಕ್ಕುಗಳಲ್ಲಿ ನಾಲ್ವರನ್ನು ನಿಲ್ಲಿಸಿಕೊಂಡು, "ಪ್ರಿಯರೆ. ಮಿತ್ರರೇ ! ನಿಮ್ಮಲ್ಲಿ ಒಬ್ಬರು, ಜರ್ಮನ್ ದೇಶದವರು ಇದ್ದಹಾಗೆ ಇದ್ದೀರಿ. ಅದೇ ಧೃಡ ಮೈಕಟ್ಟು, ತಲೆಯೋಡು : ಇನ್ನೊಬ್ಬರು ಇಟಾಲಿಯನ್ ಇದ್ದಹಾಗೆ ಇದ್ದೀರಿ. ಮತ್ತೊಬ್ಬರು ಅಮೆರಿಕನ್ ತರಹ ಇದ್ದೀರಿ. ನಾಲ್ಕನೆಯವರು ಅರಬ್ಬೀ ದೇಶದವರ ಹಾಗೆ ಕಾಣಿಸುತ್ತೀರಿ. ಹೌದೇ" ಎಂದಳು. ನಾಲ್ವರೂ ತಲೆಯಲ್ಲಾಡಿಸಿದರು.

"ಮೂಗಿನನೇರ ನೋಡಿದರೆ ಮೈಯ್ಯಿನ ಮಾಟ ತಿಳಿಯೋ ಹಾಗೆ, ಮುಖ ನೋಡಿದರೆ ದೇಶ ಇಂತಹುದು ಅಂತ ಹೇಳಬಹುದು : ಲಾಗಾಯ್ತಿನಿಂದ ಮಾನವರಲ್ಲಿ ಪ್ರೀತಿಯನ್ನು ಪ್ರದಶೀಸಲು 'ಚುಂಬನ'ವನ್ನು ಅಸ್ತ್ರವನ್ನಾಗಿ ಬಳಸುತ್ತಾರೆ. ಒಂದೊಂದು ದೇಶದಲ್ಲಿ ಒಂದೊಂದು ಜನಾಂಗದಲ್ಲಿ ಒಂದೊಂದು ತರಹ ಚುಂಬನ ರೂಢಿಯಲ್ಲಿರುತ್ತದೆ. ಪ್ರೇಕ್ಷಕರ ಪ್ರಬುದ್ಧತೆಗೆ ಸಹಾಯವಾಗಲಿ ಎಂದು ನೀವು ಒಬ್ಬೊಬ್ಬರಾಗಿ ನಿಮ್ಮ ದೇಶದ ಚುಂಬನಾ ರೀತಿಯನ್ನು ಪ್ರದರ್ಶಿಸುತ್ತೀರಾ" ದಯವಿಟ್ಟು ;" ಎಂದು ಕೇಳಿಕೊಂಡಳು.

ಒಬ್ಬರ ಮುಖ ಒಬ್ಬರು ನೋಡಿಕೊಂಡರು. ನಾಲ್ವರೂ ಮೀಸೆ ಹೊತ್ತವರು. ಕಡೆಗೆ ನಾಲ್ವರೂ ಆಕೆಯ ಕಡೆಗೆ ತಿರುಗಿ "ಯಾರ ಜತೆ ಪ್ರದರ್ಶಿಸೋದು" ಎನ್ನುವಂತೆ ಆಕೆಯ ಮುಖವನ್ನೇ ನೋಡಿದರು. ತುಸು ನಕ್ಕು. "ಸಿದ್ಧವಾಗಿದ್ದೇನೆ, ನಿಮ್ಮ ಸೇವಕಿ" ಎನ್ನುವಂತೆ, ಬಿಲ್ಲಿನಂತಿದ್ದ ತುಟಿಗಳನ್ನು, ಸೊನ್ನೆಯಂತೆ ದುಂಡುಮಾಡಿ ನಿಂತಳು.

ಮೊದಲು ನುಗ್ಗಿದವ ಇಟಾಲಿಯನ್, ಹೋದವನೇ ಬಲಗೈಯನ್ನು ಆಕೆಯ ಸೊಂಟಕ್ಕೆ ಆನಿಸಿ, ಭರತನಾಟ್ಯದವರ ತರಹ ಮೈಬಾಗಿಸಿ, ಚುಂಬನವನ್ನು ಒಂದು ನಿಮಿಷ ಪ್ರದರ್ಶಿಸಿದ. ಆನಂತರ ಆಕೆ ನೆರೆದು ನಿಂತು ಇಟಾಲಿಯನ್ ಚುಂಬಿಸಿದರೆ ಸೊಂಟಕ್ಕೆ ಊನ ಅಂತ ಈಗ ತಿಳಿಯಿತು, ಎಂದು ಸೊಂಟವನ್ನು ನೀವಿಕೊಂಡಳು.

ಎರಡನೆಯವ ಜರ್ಮನ. ಎದುರು ನಿಂತು, ಕಾಲ್ಜೋಡಿಸಿ ಸೆಲ್ಯೂಟ್ ಹಾಕಿದ. ಆಮೇಲೆ ನೇರನೆ ಆಕೆಯ ಕಣ್ಣುಗಳನ್ನೇ ದಿಟ್ಟಿಸುತ್ತಾ, ಮೆಲ್ಲ ಮೆಲ್ಲಗೆ ಹತ್ತಿರ ಹೋಗಿ

ಮುಖವನ್ನು ತನ್ನ ಕೈಗಳಿಂದ ಹಗೂರಾಗಿ ಹಿಡಿದು, ಪುಸ್ತಕದಲ್ಲಿ ಹೇಳಿದಂತೆ, ಚುಂಬಿಸಿದ. "ಮುತ್ತು ಬೇಕೇ ಮುತ್ತು ? ಕೆಂದುಟಿಯ ಸವಿತುತ್ತು" ಎಂದು ಕುವೆಂಪು ಹಾಡಲಿಲ್ಲವೇ ಅದನ್ನು ಕೇಳಿಸಿಕೊಂಡಿದ್ದ ಅಂತ ಕಾಣುತ್ತೆ, ಆ ಜರ್ಮನ್ ಜಂಟಲ್ ಮೆನ್. ತುತ್ತು ಉಣ್ಣುವರ ತರಹಾನೇ ತುಟಿಯನ್ನುಂಡ. ಸುಮಾರು ಮೂವತ್ತು ಸೆಕೆಂಡುಗಳಲ್ಲಿ ಆತನ ಹೊಟ್ಟೆ ತುಂಬಿರಬೇಕು. ಬೇರೆಯಾಗಿ ನಿಂತ.

ಮೂರನೆಯ ಪ್ರದರ್ಶನಕಾರ ಅಮೆರಿಕನ್ನ. ಮಧ್ಯ ವಯಸ್ಸಿನವ. "ನನ್ನ ಹೆಂಡತಿ ಬಂದಿದ್ದಾಳೆ, ಎಲ್ಲವನ್ನು ನೋಡುತ್ತ ಮುಂದಿರದಲ್ಲಿ ಕುಳಿತಿದ್ದಾಳೆ" ಎಂದು ಪೀಠಿಕೆ ಹಾಕಿ, ನಿಂತಲ್ಲೇ ನಿಂತು, ಅಂಗಿ ಗುಂಡಿಯನ್ನು ಅಂಗೈಲಿ ಹೊಸೆಯುಕ್ಕೆ ಶುರು ಮಾಡಿದ. ಆಕೆಯೇ ಮುಂದು ಬಂದು "ನಿಮ್ಮ ಹೆಂಡತಿ ಏನೂ ಅನ್ನುಲ್ಲ. ಏನು ತಿಳಿದು ಕೊಳ್ಳುಲ್ಲ. ಹೆಂಗಸರ ಹೃದಯ ಹೇಗೆ ಅನ್ನುವುದು ನನಗೂ ಗೊತ್ತು ! ನಿಮ್ಮ ದೇಶದವರು ಹೇಗೆ ಚುಂಬಿಸುತ್ತಾರೋ ಅದನ್ನು ಪ್ರದರ್ಶಿಸಬಹುದಲ್ಲ ! " ಎನು ತ್ತಾ ಹತ್ತಿರ ಹತ್ತಿರಕ್ಕೆ ಅಲೆಗಳಂತೆ ಸಾಗಿ ಬಂದಳು. ಮುಖದ ಬೆವರನ್ನು ಆತ ಒರೆಸಿ ಕೊಂಡು ಗುಬ್ಬಚ್ಚಿ ತರಹ ಹತ್ತು ಸೆಕೆಂಡುಗಳಲ್ಲಿ ಇಪ್ಪತ್ತು ಸಲ ಪ್ಪು ಪ್ಪು ಪ್ಪು ಮಾಡಿದ. ಆಮೇಲೆ ಕರವಸ್ತ್ರದಿಂದ ತನ್ನ ತುಟಿ ಒರೆಸಿಕೊಂಡ. ಅವನ ಮುಖ ಅವನಿಗೆ ಕಾಣಲೊಲ್ಲದು. ಅವನು ಒರೆಸಿಕೊಳ್ಳಬೇಕಾಗಿದ್ದುದು ತನ್ನ ಕೆನ್ನೆಯನ್ನು. ಅಲ್ಲೇ ಕಾಮನ ಬಿಲ್ಲಿನಂತೆ ಈಕೆ ತುಟಿಯ ರಂಗು ಮುದ್ರೆಗಳು ಬಿದ್ದಿತ್ತು !

ಉಳಿದವನು ಅರಬ್ಬೀಯ. ಬಾಬಾಬುಡನ್‌ಗಿರಿಗೆ ಮೊದಲು ಬಂದವನು ಇವನ ಗೋತ್ರದವನೇ ಇರಬೇಕು. ಅವರುಗಳೆಲ್ಲಾ ಕುದುರೆ ಪರೀಕ್ಷೆ ಮಾಡಬೇಕಾದರೆ ಮುಖ ನೋಡಿ ಮಣೆ ಹಾಕುಲ್ಲ. ಬೆನ್ನಿನಮೇಲೆ ಕೈ ಆಡಿಸಿ ಭಾರ ತಡೆಯುತ್ತೇ ಅಂತ ನೋಡುತ್ತಾರೆ. ಗೊರಸನ್ನ ಬಿಡಿಸಿ ನೋಡಿ ಓಡೋ ಶಕ್ತಿಯಿದೆಯೇ ಅಂತ ಪರೀಕ್ಷಿಸುತ್ತಾರೆ. ಅಶ್ವಪರೀಕ್ಷೆ ಮಾಡಿಯೇ ಸವಾರಿ ಆಮೇಲೆ ಮಾಡುವ ಜಾಣ್ಮೆ. ಅಂತಹವರು ಯಾರೋ ಬಂದು ಎದುರು ನಿಂತು ತುಟಿ ತೆರೆದು ಮುತ್ತಿಡು ಅಂದರೆ, ಹಲ್ಲು ಪರೀಕ್ಷೆ ಮಾಡದೆ ಮೂತಿ ಇಡ್ತಾರೆಯೇ ಅಂತ ಅನುಮಾನ ನನಗೆ.

ಈಕೆಯೇನೋ ಕುದುರೆಯಂತೆ ಟಕಟಕ ಶಬ್ದ ಮಾಡುತ್ತಾ ಆತನೆದುರಿಗೆ ಹೋಗಿ ಸೊಂಟದ ಮೇಲೆ ಕೈ ಇಟ್ಟುಕೊಂಡು ವಾಲಿನಿಂತು, ಕಣ್ಣು ರೆಪ್ಪೆಗಳನ್ನು ಪಟಪಟ ಹಾರಿಸಿದಳು. ಇಬ್ಬರು ಸುಮಾರು ಸಮಾನ ಎತ್ತರ. ಈಕೆ ಸ್ವಲ್ಪ ಬೂಸಕ್ಕ ಆತ ಕೃಶಾಂಗ. ಒಂದು ನಿಮಿಷ ಆತ ಈಕೆಯನ್ನು ನೋಡಿದ. ನಂತರ ಬಾಯಿ ಬಿಟ್ಟ. ಮುತ್ತುಕೊಡುಕ್ಕಲ್ಲ. ಮಾತನಾಡುಕ್ಕೆ !

"ನಮ್ಮ ದೇಶದಲ್ಲಿ ಚುಂಬಿಸುವುದು ಪವಿತ್ರವಾದ ವಿಷಯ. ಎಲ್ಲರೆದುರಿಗೂ ಪ್ರದರ್ಶಿಸುವ ಅಲ್ಪ ವಿಷಯವಲ್ಲ. ಹೇರಂನಲ್ಲಿಕೂಡ, ಒಬ್ಬೊಬ್ಬ ಹೆಂಡತಿಯನ್ನು

ಗುಟ್ಟಿನಲ್ಲಿ ಗಂಡ ಚುಂಬಿಸುವ ನಿಯಮ. ವಿಷಯ ತಿಳಿದುಕೋಬೇಕು ಅಂತ ಆಸೆ ನಿನಗಿದೆ. ತಿಳಿಸ್ತೀನಿ. ತಡಿ" ಎಂದ

ಜಟಕ್ಕಂತ ಅನಾಮತ್ತು ಅವಳನ್ನೆತ್ತಿ ತನ್ನ ತೋಳಮೇಲೆ ಚೀಲದ ತರಹ ಹಾಕಿಕೊಂಡ. ಕುಂಯ್ಯ ಪಂಯ್ಯ ಅಂತ ಆಕೆ ಕೂಗ್ತಾನೆ ಇದ್ದಳು. ಮಂಟಪದ ಹಿಂದುಗಡೆಗೆ ಆ ಧಡಿ ಭಾರವನ್ನು ಹೊತ್ತು ಓಡಿ, ಪಕ್ಕದಲ್ಲಿದ್ದ ಓಣಿಯೊಳಕ್ಕೆ ನುಗ್ಗಿ ಕಣ್ಮರೆಯಾದ.

ಎರಡು ಮೂರು ನಿಮಿಷ ಆದಮೇಲೇ ಆಕೆ ಒಬ್ಬಳೇ ರಂಗಮಂಟಪದಲ್ಲಿ ಕಾಣಿಸಿಕೊಂಡಿದ್ದು. ಕುಂಟು ಕುದುರೆ ತರಹ ನಡೆದುಕೊಂಡು ಬಂದಳು. ಕಳಕೊಂಡ ಸಾಮಾನು ಜೇಬಿನಲ್ಲಿದೆಯೇ ಅಂತ ಹುಡುಕುವುದಿಲ್ಲವೇ, ಹಾಗೆ ಆಕೆ ಮೈ ಕೈಗಳನ್ನು ತಡವರಿಸಿ ಹುಡುಕುತ್ತಾ ಬಂದು ನಿಂತಳು. ಬೊಚ್ಚು ಬಾಯಾಗಿದ್ದಳು..

"ಆತ ಅರೇಬಿಯಾಕ್ಕೆ ನನ್ನ ಎತ್ತಿಕೊಂಡು ಹೋಗಿಬಿಡ್ತಾನೇನೋ ಎಂತಿದ್ದೆ ಪ್ರಥಮ ಚುಂಬನ ಅವನದು. ನನ್ನ ಹಲ್ಲುಗಳೆಲ್ಲಾ ಹೊರಕ್ಕೆ ಬಂದುವು" ಎಂದು ತತಾತ್ಪಾತ್ತಾ ಮಾತಾಡಿದಳು.

ಆಮೇಲೆ ಯಥಾಪ್ರಕಾರ ಅಭ್ಯಂಗನಕ್ಕಿಳಿಯುತ್ತಿದ್ದ ಹೆಣ್ಣು ಮಕ್ಕಳ ಡ್ರಿಲ್. ಸಂಗೀತ ಇತ್ಯಾದಿ.

ಪಕ್ಕದಲ್ಲಿದ್ದ ಮಿತ್ರ ಮಾತೇ ಆಡಿರಲಿಲ್ಲ. ಹೋಗಿ ಬಿಟ್ಟನೋ ಎಂದು ತಿರುಗಿ ನೋಡಿದೆ. ಎಳೆಮಕ್ಕಳು ಕಣ್ಣಮುಂದೆ ಬೆರಳುಗಳನ್ನು ಚಾಚಿ, ಸಂದುಗಳಲ್ಲಿ ದೊಡ್ಡವರನ್ನು ನೋಡುತ್ತಾ, ಪಾಪ ಎಲ್ಲಿ ಎಂದು ಆಟ ಆಡುಲ್ಲವೇ, ಹಾಗೆ ಈತ ಬೆರಳುಗಳನ್ನು ಕಣ್ಣುಮುಂದೆ ಬಿಡಿಸಿ ಹಿಡಿದು, ಬೆರಳು ಕಂಡಿಗಳಲ್ಲಿ ರಂಗಮಂಟಪ ವನ್ನು ನೋಡುತ್ತಿದ್ದ.

ಮಿತ್ರ ಮಗುವನ್ನು ಕರೆದುಕೊಂಡು ಹಿಂತಿರುಗಿ ಹೋಟಲಿಗೆ ಬಂದು, ಸಿಗರೇಟ್ ಒಂದನ್ನು ಅವನ ಬಾಯಿಗೆ ಚೀಪುಕ್ಕೆ ಕೊಟ್ಟು, ಮಲಗು ಮಲಗೆಲೆ ಮಂಕ! ಬೆಳಗಾಗುತನಕ ಹಾಡಿ, ಆಮೇಲೆ ನನ್ನ ಕೊರಡಿಗೆ ಬಂದೆ.

ರಾಮಸ್ಕಂಧಂ ಅನ್ನು ಮರೆಯದೆ ಹೇಳಿ ಮಲಗಿದೆ. ದುಸ್ವಪ್ನಗಳೇನೋ ತಪ್ಪಿದುವು, ಆದರೆ ಸ್ವಪ್ನಗಳಲ್ಲ.

" ವಿದ್ಯಾರ್ಥಿಗಳಲ್ಲಿ ಅಶಿಸ್ತು" ವಿಷಯವಾಗಿ ಜನನಾಯಕರಲ್ಲಿ ಮೊನ್ನೆ ನಡೆದ ಸಭೆಯಲ್ಲಿ ಗೊಂದಲವೋ ಗೊಂದಲವಂತೆ ! ಗುದ್ದಾಟವೋ ಹೊಡೆದಾಟವಂತೆ !!

* * * *

ಕೊರವಂಜಿ

ಕೆಂಪೇಗೌಡ ಸರ್ಕಲ್, ಬೆಂಗಳೂರು-೯

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ

ತಿಳಿ ಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು, ಇವುಗಳಿಗೆ ಸರ್ವದಾ ಸುಸ್ವಾಗತವುಂಟು, ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪುನೆಪ್ಪುಗಳು ಕಡಿಮೆಯಾಗುವುವು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ಮಿಕ್ಕ ವಿಚಾರಗಳನ್ನು ವ್ಯವಸ್ಥಾಪಕರಲ್ಲೂ ಪ್ರಸ್ತಾಪಿಸಬೇಕು.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೩-೦೦
ಬಿಡಿ ಪ್ರತಿ ಕೇವಲ ೨೫ ಪೈಸೆ.

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೇ ನಮಗೆ ತಿಳಿಸಿದರೆ ಬಹಳ ಸಹಾಯ ಮಾಡಿದಂತಾಗುವುದು. ಹಾಗೆ ಬದಲಾವಣೆಯಾದ ವಿಳಾಸವನ್ನು ತಿಳಿಸುವಾಗ ತಮ್ಮ ಚಂದಾ ಸಂಖ್ಯೆಯನ್ನೂ ತಿಳಿಸಬೇಕಾಗಿ ವಿನಂತಿ.

NEWS AGENTS

1. M/s JAI HIND TRADING CORPORATION
   Park View, KOLAR
2. Shri GOPAL DOSS
   104, M. G. Road, POONA-1
3. M/s BHARATH STORES
   4/69, W. E. A. Krishna Market
   Karolbagh NEW DELHI-5

Reg. No. B.G. 343 KORAVANJI January 1965

Printed by B. S. Iyengar, Bangalore-2
Publisher—B. N. Gupta Editor—M. Shivaram